ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ಕಾರ್ಯಭಾರ ಒತ್ತಡ ನಿರ್ವಹಣೆಯ ಭಾಗವಾಗಿ ಮುಂಬರುವ ದಕ್ಷಿಣ ಆಫ್ರಿಕಾ ವಿರುದ್ಧದ ಏಕದಿನ ಸರಣಿಯಿಂದ ಟೀಮ್ ಇಂಡಿಯಾದ ಆಟಗಾರರಾದ ಹಾರ್ದಿಕ್ ಪಾಂಡ್ಯ ಹಾಗೂ ಜಸ್‌ಪ್ರೀತ್ ಬೂಮ್ರಾ ಹೊರಗುಳಿಯುವ ಸಾಧ್ಯತೆಯಿದೆ.

20 ನವೆಂಬರ್ 2025 ಗುರುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ :249 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಸಿಡಿಮದ್ದು ಸ್ಫೋಟಕ್ಕೆ ಕಬ್ಬಿಣದ ಸರಳು ಮಿದುಳನ್ನು ಹೊಕ್ಕಿತು! » 2

ಸಹಕಾರ ಕ್ಷೇತ್ರದಿಂದ ರೈತರ ಪ್ರಗತಿ ಸಾಧ್ಯ » 3

ಬಿಹಾರ: ಶಾಸಕಾಂಗ ಪಕ್ಷದ ನಾಯಕರಾಗಿ ನಿತೀಶ್ » 4

ಕೆಪಿಸಿಸಿ ಅಧ್ಯಕ್ಷ ಸ್ಥಾನ ತೊರೆಯುವ ಸುಳಿವು

ಶಾಶ್ವತವಾಗಿರಲು ಬಯಸುವುದಿಲ್ಲ, ಹೈಕಮಾಂಡ್ ಸೂಚನೆಯಂತೆ ಇದ್ದೇನೆ: ಡಿ.ಕೆ.ಶಿ.

• ಪ್ರಜೋದಯ ವರದಿ

ಬೆಂಗಳೂರು: ನಾಯಕತ್ವ ಬದಲಾವಣೆ ನಂತರ ಮುಖ್ಯಮಂತ್ರಿ ಸ್ಥಾನದ ಮೇಲೆ ಕಣ್ಣಿಟ್ಟಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಯುವ ಸುಳಿವು ನೀಡಿದ್ದಾರೆ.

ಕಾಂಗ್ರೆಸ್ ಭವನದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಇಂದಿರಾ ಗಾಂಧಿ ಅವರ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೆಪಿಸಿಸಿ ಅಧ್ಯಕ್ಷ ಸ್ಥಾನದಲ್ಲಿ ನಾನು ಶಾಶ್ವತವಾಗಿ ಇರಲು ಬಯಸುವುದಿಲ್ಲ ಎಂದು ಹೇಳಿದ್ದಾರೆ.

2020ರಲ್ಲಿ ಕೆಪಿಸಿಸಿ ಅಧ್ಯಕ್ಷನಾಗಿ ಅಧಿಕಾರ ಸ್ವೀಕರಿಸಿದ್ದೆ. ಈಗಾಗಲೇ ಐದು ವರ್ಷ, ಐದು ತಿಂಗಳು ಪೂರೈಸಿದ್ದೇನೆ. 2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತ ಪಡೆದು ಅಧಿಕಾರಕ್ಕೆಬಂದಾಗಉಪಮುಖ್ಯಮಂತ್ರಿಯಾದೆ. ಆಗಲೇ ಕೆಪಿಸಿಸಿ ಅಧ್ಯಕ್ಷ ಸ್ಥಾನ ಬಿಡಲು ಸಿದ್ಧವಾಗಿದ್ದೆ. ಹೈಕಮಾಂಡ್ ನಾಯಕರಾದ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರ ಸೂಚನೆಯಂತೆ ಮುಂದುವರಿದೆ. ಬರುವ ಮಾರ್ಚ್‌ಗೆ 6 ವರ್ಷ ತುಂಬುತ್ತದೆ. ಇತರರಿಗೂ ಅವಕಾಶ ನೀಡಬೇಕೆಂದರು.

ಪಕ್ಷ ಮರೆತವರಿಗೆ ಎಐಸಿಸಿ ಉತ್ತರ

ನೂರು ಕಾಂಗ್ರೆಸ್ ಕಚೇರಿ ಶಂಕುಸ್ಥಾಪನೆ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಅದಕ್ಕೆ ಯಾರು ಸಹಕಾರ ನೀಡಿದ್ದಾರೆ, ನೀಡಿಲ್ಲ ಎಂದು ಪಟ್ಟಿ ನೀಡಿ ಎಂದು ಎಐಸಿಸಿ ನಾಯಕರು ತಿಳಿಸಿದ್ದಾರೆ. ಕೆಲವರು ಆಸಕ್ತಿ ತೋರಿದ್ದಾರೆ, ಕೆಲವರು ಆಸಕ್ತಿ ತೋರಿಲ್ಲ. ಕೆಲವರಿಗೆ ಕೇವಲ ಅಧಿಕಾರ ಮಾತ್ರ ಬೇಕು. ಈ ಕಾಂಗ್ರೆಸ್ ಕಚೇರಿ ದೇವಾಲಯ ಎಂಬುದನ್ನು ಕೆಲವರು ಮರೆತಿದ್ದಾರೆ. ಅದಕ್ಕೆ ನಾನು ಉತ್ತರ ನೀಡುವುದಿಲ್ಲ. ದೆಹಲಿ ನಾಯಕರು ಸರಿಯಾದ ಸಮಯ ದಲ್ಲಿ ಉತ್ತರ ನೀಡುತ್ತಾರೆ. ನಾನು ಎಷ್ಟು ದಿನ ಇರುತ್ತೇನೋ ಗೊತ್ತಿಲ್ಲ. ನಾನು ಅವಧಿಯಲ್ಲಿ ನೂರು ಕಾಂಗ್ರೆಸ್ ಕಚೇರಿ ಮಾಡಬೇಕೆಂಬುದು ನನ್ನ ಬಯಕೆ. ಈ ಸಂದರ್ಭದಲ್ಲಿ ಗಾಂಧಿ ಭಾರತ ಎಂಬ ಪುಸ್ತಕ ಬಿಡುಗಡೆ ಮಾಡಿಸಲಾಗುವುದು. ನೂರು ವರ್ಷಗಳ ಹಿಂದೆ ಗಾಂಧೀಜಿ ಅವರ ಅಧ್ಯಕ್ಷತೆಯಡಿ ಬೆಳಗಾವಿಯಲ್ಲಿ ನಡೆದ ಅಧಿವೇಶನದ ಕಾರ್ಯಕ್ರಮದ ದಾಖಲೆ ಆಧರಿಸಿ ಹಾಗು ನಮ್ಮ ಕಾರ್ಯಕ್ರಮಗಳನ್ನೂ ಸೇರಿಸಿ ಪುಸ್ತಕ ರಚಿಸಲಾಗಿದೆ ಎಂದು ತಿಳಿಸಿದರು.

ಕಾರ್ಯಕರ್ತರಿಗೆ ಅಧಿಕಾರ ಕೊಟ್ಟಿದ್ದೇವೆ

ನಮ್ಮ ನಾಯಕರು ಮತಕಳ್ಳತನದ ಬಗ್ಗೆ ಹೋರಾಟ ಮಾಡುತ್ತಿದ್ದಾರೆ. ನಮ್ಮ ರಾಜ್ಯದಲ್ಲೂ ಸಹಿ ಸಂಗ್ರಹ ಅಭಿಯಾನ ಮಾಡಿದ್ದೇವೆ. ಬಿಹಾರ, ಮಹಾರಾಷ್ಟ್ರ ಚುನಾವಣೆಗಳಲ್ಲಿ ಏನು ಹೆಚ್ಚುಕಮ್ಮಿಯಾಗಿದೆ ಎಂದು ಜನ ಚರ್ಚೆ ಮಾಡುತ್ತಿದ್ದಾರೆ. ಎಲ್ಲದಕ್ಕೂ ಕೊನೆ ಎಂಬುದು ಇದ್ದೇ ಇರುತ್ತದೆ. ನಾನು ಎಲ್ಲಿರುತ್ತೇನೆ

» ನಾಲ್ಕನೇ ಪುಟದಲ್ಲಿ

ಜಿಲ್ಲಾ, ತಾಲ್ಲೂಕು ಪಂಚಾಯಿತಿ ಚುನಾವಣೆಗೆ ಸಿದ್ಧರಾಗಿ

ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಸೇರಿ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಿದ್ಧರಾಗಿ ಎಂದು ಡಿ.ಕೆ.ಶಿವಕುಮಾರ್ ಕರೆ ಕೊಟ್ಟಿದ್ದಾರೆ.

ರಾಜಕೀಯದಲ್ಲಿ ಶೇ.33 ರಷ್ಟು ಮೀಸಲಾತಿ ಬರುವುದನ್ನು ತಡೆಯಲು ಯಾರಿಗೂ ಸಾಧ್ಯ ವಿಲ್ಲ. ನಾವು ಮಹಿಳಾ ನಾಯಕತ್ವವನ್ನು ಬೆಳೆಸಬೇಕು. ನಾಯಕರನ್ನು ಸೃಷ್ಟಿಸುವವನೇ ನಿಜ ವಾದ ನಾಯಕ. ನಾಯಕರ ಕುಟುಂಬದವರನ್ನು ನಾಯಕರಾಗಿ ಬೆಳೆಯುವುದು ಮುಖ್ಯವಲ್ಲ, ಹೊಸ ಪ್ರತಿಭೆಗಳನ್ನು ಗುರುತಿಸಿ ಬೆಳೆಸಬೇಕು ಎಂದರು.

ಪಾಲಿಕೆ ಚುನಾವಣೆಯ ವಾರ್ಡ್ ಮೀಸಲಾತಿ ಪಟ್ಟಿ ಬಿಡುಗಡೆಯಾಗಲಿದೆ. ಪಾಲಿಕೆ ಚುನಾವಣೆಯಲ್ಲಿ ಸ್ಪರ್ಧಿಸಲು ಬಯಸುವವರಿಗೆ ಅರ್ಜಿ ಕರೆಯಲಾಗುವುದು ಎಂದು ತಿಳಿಸಿದರು.

ರೇವಣ್ಣ ಮೇಲಿನ ಪ್ರಕರಣ ರದ್ದುಗೊಳಿಸಿದ ಹೈಕೋರ್ಟ್

ಮನೆ ಕೆಲಸದ ಮಹಿಳೆ ಘನತೆಗೆ ಧಕ್ಕೆ ಆರೋಪ: ತಾತ್ಕಾಲಿಕ ರಿಲೀಫ್

• ಪ್ರಜೋದಯ ವರದಿ

ಬೆಂಗಳೂರು: ಮನೆ ಕೆಲಸದ ಮಹಿಳೆಯ ಘನತೆಗೆ ಧಕ್ಕೆಯುಂಟು ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರ ವಿರುದ್ಧದ ಪ್ರಕರಣದಲ್ಲಿ ಕಾಗ್ನೈಜೆನ್ಸ್(ವಿಚಾರಣೆಗೆ ಪರಿಗಣಿಸಿದ) ತೆಗೆದುಕೊಂಡು, ವಿಚಾರಣಾ ನ್ಯಾಯಾಲಯ ಹೊರ ಡಿಸಿದ್ದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ. ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯ ಆರೋಪವನ್ನು ಪರಿಗಣಿಸಲು ಪ್ರಕರಣವನ್ನು ವಿಚಾರಣಾ ನ್ಯಾಯಾಲಯಕ್ಕೆ ಹಿಂದಿರುಗಿಸಿದೆ.

ಹೊಳೆನರಸೀಪುರ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ರದ್ದು ಕೋರಿ ಹೆಚ್.ಡಿ.ರೇವಣ್ಣ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ಪೂರ್ಣಗೊಳಿಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಂ.ಐ. ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ಆದೇಶ ಪ್ರಕಟಿಸಿತು.

ಅರ್ಜಿಯನ್ನು ಭಾಗಶಃ ಪುರಸ್ಕರಿಸಿರುವ ಹೈಕೋರ್ಟ್, ರೇವಣ್ಣ ವಿರುದ್ಧ ಐಪಿಸಿ ಸೆಕ್ಷನ್ 354ರ (ಮಹಿಳೆಯ ಘನ ತೆಗೆ ಚ್ಯುತಿ) ಅಡಿ ಕಾಗ್ನೈಜೆನ್ಸ್ ತೆಗದಕೊಂಡು 42ನೇ ಎಸಿಜೆಎಂ ನ್ಯಾಯಾಲಯ ಹೊರಡಿಸಿದ್ದ ಆದೇಶ ರದ್ದು ಪಡಿಸಿದೆ. ಐಪಿಸಿ 354ಎ (ಲೈಂಗಿಕ ದೌರ್ಜನ್ಯ) ಅಡಿ ಸೂಕ್ತ ಆದೇಶ ಹೊರಡಿಸಲು ಪರಿಗಣಿಸುವಂತೆ ಪ್ರಕರಣವನ್ನು ವಿಚಾರಣಾ ನ್ಯಾಯಾಲಯಕ್ಕೆ ಹಿಂದಿರುಗಿಸಿದೆ. ವಿಸ್ತೃತ ತೀರ್ಪಿನ ಪ್ರತಿ ಇನ್ನಷ್ಟೇ ಲಭ್ಯವಾಗಬೇಕಿದೆ.

ತೀರ್ಪು ಪ್ರಕಟಿಸಿದ ಬಳಿಕ ನ್ಯಾಯಮೂರ್ತಿಗಳು, ದೂರಿನಲ್ಲಿನ ಆರೋಪಗಳು ಐಪಿಸಿ ಸೆಕ್ಷನ್ 354ಎ ಅಡಿ ಬರುತ್ತವೆ. ಐಪಿಸಿ ಸೆಕ್ಷನ್ 354 ಇಲ್ಲಿ ಅನ್ವಯಿಸುವುದಿಲ್ಲ. ನನ್ನ ಪ್ರಕಾರ ಸಂತ್ರಸ್ತೆಯ ಘನತೆಗೆ ಹಾನಿ ಮಾಡುವ ಉದ್ದೇಶ ತೋರುವುದಿಲ್ಲ. ಇದು ಲೈಂಗಿಕ ದೌರ್ಜನ್ಯ ವಾ ಗುತ್ತದೆ. ಇದು ನನ್ನ ಅಭಿಪ್ರಾಯ, ನಿಮಗೆ ಅಗತ್ಯವಿದ್ದರೆ ಅದನ್ನು ಪ್ರಶ್ನಿಸಬಹುದೆಂದು ಪ್ರಾಸಿಕ್ಯೂಷನ್ ಕುರಿತು ಹೇಳಿತು.

ಮೂರು ವರ್ಷ ಅಥವಾ ಅದಕ್ಕಿಂತ ಕಡಿಮೆ ಶಿಕ್ಷೆಯಾದರೆ ಪೊಲೀಸರು ಎಫ್‌ಐಆರ್ ದಾಖಲಿಸಲಾಗದು ಎಂಬ ವಾದವನ್ನೂ ತಳ್ಳಿಹಾಕಲಾಗಿದೆ ಎಂದೂ ಪೀಠ ಹೇಳಿತು. ರಾಜ್ಯ ಹೆಚ್ಚುವರಿ ಸರ್ಕಾರಿ ಅಭಿಯೋಜಕ ಬಿ.ಎನ್. ಜಗದೀಶ್, 2024ರ ಸೆ.9ರಂದು ವಿಚಾರಣಾ ನ್ಯಾಯಾಲಯ ಐಪಿಸಿ ಸೆಕ್ಷನ್ 352 ಹಾಗೂ 354ಎ ಆರೋಪಗಳಿಗೆ ಕಾಗ್ನೈಜೆನ್ಸ್ ತೆಗೆದುಕೊಂಡಿದೆ. ಈ 2 ಸೆಕ್ಷನ್‌ಗಳ ಅಡಿಯಲ್ಲಿ ಆರೋಪ ಪಟ್ಟಿ ಸಲ್ಲಿಸಲಾಗಿದೆ ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ನ. 21-22 ರಂದು ಜೆಡಿಎಸ್ ರಜತ ಮಹೋತ್ಸವ

• ಪ್ರಜೋದಯ ವರದಿ

ಹಾಸನ: ಜೆಡಿಎಸ್ ಪಕ್ಷಕ್ಕೆ 25 ವರ್ಷ ಪೂರ್ಣಗೊಂಡಿರುವ ಹಿನ್ನಲೆಯಲ್ಲಿ ನ.21 ಹಾಗು 22ರಂದು ಬೆಂಗಳೂರಿನ ಜೆಪಿ ಭವನದಲ್ಲಿ ರಜತ ಮಹೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಶಾಸಕ ಎ.ಮಂಜು ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಹಾಗು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಸಮಾರಂಭ ನೆರವೇರ ಲಿದೆ. ನ.21ರ ಶುಕ್ರವಾರ ಸಂಜೆ 4.30ಕ್ಕೆ ಸೇವಾದಳ ವತಿಯಿಂದ ಧ್ವಜಾರೋಹಣ, ಸಂಜೆ 5 ಗಂಟೆಗೆ ಹಾಲಿ ಶಾಸಕರು ಹಾಗು ಮಾಜಿ ಸಚಿವರು, ವಿಧಾನ ಪರಿಷತ್ ಸದಸ್ಯರು ಪ್ರದರ್ಶಿನಿ ಉದ್ಘಾಟಿಸುವರು. ಸಂಜೆ 6.30ಗಂಟೆಗೆ ಪಕ್ಷದ ರಾಜ್ಯ ಹಾಗು ರಾಷ್ಟ್ರೀಯ ಪರಿಷತ್ ಪದಾಧಿಕಾರಿ ಗಳ ಸಭೆ ನಡೆಯಲಿದೆ. ನ.22ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಪಕ್ಷದ ರಜತ ಮಹೋತ್ಸವ ಹಾಗು ರಾಷ್ಟ್ರೀಯ ಮಹಾ ಅಧಿವೇಶನ ನಡೆಯಲಿದೆ ಎಂದು ಹೇಳಿದರು.

ಡಿ.1 ರಿಂದ 2026ರ ಜನವರಿ 15ರವರೆಗೆ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರ ಮತ್ತು ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರದರ್ಶಿನಿ ಮತ್ತು ಕಾರ್ಯಕರ್ತರ ಸಭೆ ನಡೆಯಲಿವೆ. ಜನವರಿ ಕೊನೆಯಲ್ಲಿ ಕಾರ್ಯಕರ್ತರ ಬೃಹತ್ ಸಮಾವೇಶ ನಡೆಯಲಿದೆ. ಹಾಸನದಲ್ಲಿ ಕಾರ್ಯಕರ್ತರ ಬೃಹತ್ ಸಮಾವೇಶದ ಮೂಲಕ ಪಕ್ಷ ಸಂಘಟನೆಗೆ ಚಾಲನೆ ನೀಡಬೇಕೆಂಬ ಯೋಜನೆ ಮೊದಲಿನಿಂದಲೂ ಇದೆ. ಆದರೆ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ಅನಾರೋಗ್ಯ ಕಾರಣದಿಂದ ದಿನಾಂಕ ಮುಂದೂಡಲಾಗಿದೆ. ಹಾಸನದಲ್ಲಿ ಶೀಘ್ರವಾಗಿ ಸಮಾವೇಶ ನಡೆಸುತ್ತೇವೆಂದರು.

ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಅಥವಾ ಸಂಪುಟ ಪುನಾರಚನೆ ಕುರಿತು ನಮಗೆ ಮಾಹಿತಿ ಇಲ್ಲ. ಕುರ್ಚಿ ಕಿತ್ತಾಟದಿಂದ ಅಭಿವೃದ್ಧಿ ಕಾಮಗಾರಿಗಳು ಆಗುತ್ತಿಲ್ಲ. ಬೆಂಗಳೂರಿನಲ್ಲಿ ರಸ್ತೆ ಗುಂಡಿ ಮುಚ್ಚಲು ಸರ್ಕಾರದ ಬಳಿ ಅನುದಾನವಿಲ್ಲ. ಪಂಚ ಗ್ಯಾರಂಟಿಗಳಿಗೆ ಹಣ ಹೊಂದಿಸಲಷ್ಟೇ ಸರ್ಕಾರ ಶಕ್ತವಾಗಿದೆ. ಈ ಸರ್ಕಾರ ಇರುವುದಕ್ಕಿಂತ ಪತನವಾಗುವುದೇ ಲೇಸು ಎಂದರು.

2028ರ ಚುನಾವಣೆಯಲ್ಲಿ ಎನ್‌ಡಿಎ ಅಧಿಕಾರಕ್ಕೆ ಬರುವುದು ಹಾಗು ಹೆಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗುವುದು ಶತಃಸಿದ್ಧ. ನಾನು ಜೆಡಿಎಸ್ ಶಾಸಕನಾಗಿದ್ದು ಮುಂದಿನ

» ನಾಲ್ಕನೇ ಪುಟದಲ್ಲಿ

ಧಾರ್ಮಿಕ ಕೇಂದ್ರಗಳ ಬಲವರ್ಧನೆಗೆ ಕೈ ಜೋಡಿಸಿ: ಸುತ್ತೂರು ಶ್ರೀ

ಸಂಕ್ಲಾಪುರ ಮಠದಲ್ಲಿ ಶ್ರೀಗಳ ಪಟ್ಟಾಧಿಕಾರ ಮಹೋತ್ಸವ | ವಿವಿಧ ಮಠಾಧೀಶರು ಭಾಗಿ

• ಪ್ರಜೋದಯ ವರದಿ

ಆಲೂರು: ತ್ರಿವಿಧ ದಾಸೋಹದ ಮೂಲಕ ನಾಡಿನ ಮಠ ಮಾನ್ಯಗಳು ಸದೃಢ ಸಮಾಜ ನಿರ್ಮಾಣಕ್ಕೆ ಅತ್ಯಮೂಲ್ಯ ಕೊಡುಗೆ ನೀಡಿದ್ದು, ಪ್ರತಿಯೊಬ್ಬರು ಧಾರ್ಮಿಕ ಕೇಂದ್ರಗಳ ಬಲ ವರ್ಧನೆಗೆ ಕೈಜೋಡಿಸಬೇಕೆಂದು ಸುತ್ತೂರು ಶ್ರೀ ವೀರಸಿಂಹಾಸನ ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಸಂಕ್ಲಾಪುರದ ಶ್ರೀ ಶಾಂತಮಲ್ಲೇಶ್ವರ ಸ್ವಾಮಿ ಮಠದಲ್ಲಿ ಬುಧವಾರ ಹಮ್ಮಿ ಕೊಂಡಿದ್ದ ಶ್ರೀ ನಿರಂಜನ ಸ್ವಾಮೀಜಿ ಪಟ್ಟಾಧಿಕಾರ ಮಹೋತ್ಸವದ ಅಧ್ಯಕ್ಷತೆ ವಹಿಸಿ ಆಶೀರ್ವಚನ ನೀಡಿದರು. ಮಠ ಮಾನ್ಯಗಳು ಮಕ್ಕಳಿಗೆ ವಿದ್ಯಾದಾನ, ಸಂಸ್ಕಾರ, ಮಾನವೀಯ ಮೌಲ್ಯಗಳನ್ನು ಕಲಿಸಿ ಕೊಡುತ್ತವೆ. ಭಕ್ತರು ಹಾಗು ಮಠಗಳ ಬಾಂಧವ್ಯ ಅತ್ಯಮೂಲ್ಯವಾದುದು. ಜನಸಾಮಾನ್ಯರಿಗೆ ಸಂಸ್ಕಾರ ಕಲಿಸುವ ಕೆಲಸವನ್ನು ಧರ್ಮ ಗುರುಗಳು ಹಾಗು ಮಠಗಳು ಮಾಡುತ್ತವೆಂದರು. ಸಮಾಜದಲ್ಲಿ ಯಾವಾಗಲೂ ಶಾಂತಿ, ಸಹಬಾಳ್ವೆ, ಪರಸ್ಪರ ಸಹಕಾರ ಮನೋಭಾವ ಮೂಡಬೇಕೆನ್ನುವುದು ಶ್ರದ್ಧಾ ಕೇಂದ್ರಗಳ ಆಶಯವಾಗಿರುತ್ತದೆ. ಆ ಮೂಲಕ ಉತ್ತಮ ಸಮಾಜ ಕಟ್ಟಬೇಕು. ಭಕ್ತಾಧಿಗಳಿಂದ ಮಠ ಮಾನ್ಯಗಳು ಬೆಳೆಯುತ್ತವೆ. ತ್ರಿವಿಧ ದಾಸೋಹವನ್ನು ಬಲಪಡಿಸಬೇಕು. ಮಠದ ಶ್ರೇಯೋಭಿವೃದ್ಧಿಗೆ ಎಲ್ಲರೂ ಸಹಕಾರ ನೀಡ ಬೇಕೆಂದು ಸಲಹೆ ನೀಡಿದರು.

ವ್ಯಕ್ತಿ ಸಂಸ್ಕಾರವಂತನಾಗಬೇಕೆಂದರೆ ಮುಖ್ಯವಾಗಿ ಕಲಿಕೆ ಇರಬೇಕು. ಅದು ಮನೆಯಿಂದಲೇ ಆಗಬೇಕು. ನಂತರ ವಿದ್ಯೆ ಕಲಿಸುವ ಗುರಿ ಆ ದಾರಿಯಲ್ಲಿ ಕರೆದೊಯ್ಯುತ್ತಾನೆ. ಧಾರ್ಮಿಕ ಶ್ರದ್ಧಾ ಕೇಂದ್ರಗಳು ಆ ಕೆಲಸವನ್ನೇ ಮಾಡುತ್ತವೆ. ಗ್ರಾಮೀಣ ಭಾಗದಲ್ಲಿ ಇಂದಿಗೂ ಮಾನ ವೀಯ ಮೌಲ್ಯ, ಕರುಣೆ, ಸಹಕಾರ ಮನೋಭಾವ ಇದೆಯೆಂದರೆ ಅದಕ್ಕೆ ಭಾರತೀಯ ಧಾರ್ಮಿಕ ಪರಂಪರೆಯೇ ಕಾರಣವೆಂದು ಪ್ರತಿಪಾದಿಸಿದರು.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದ್ದ ತುಮಕೂರು ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗಸ್ವಾಮೀಜಿ ಮಾತನಾಡಿ, ಸಂಕ್ಲಾಪುರ ಮಠಕ್ಕೆ ಉತ್ತರಾಧಿಕಾರಿ ನೇಮಕ ಮಾಡಿದ್ದು ಶ್ರೀ ಮಠದ ಭಕ್ತರು ಅವರಿಗೆ ಎಲ್ಲಾ ರೀತಿಯ ಸಹಕಾರ ನೀಡಬೇಕು. ಶಿಕ್ಷಣದ ಮೂಲಕ ಜ್ಞಾನ, ಸಂಸ್ಕಾರ ಪಡೆಯಬೇಕು. ಸದ್ಭಕ್ತಿ, ಭಾತೃತ್ವ ಎಲ್ಲರಲ್ಲೂ ಬೆಳೆಯಬೇಕು. ಸಂಕ್ಲಾಪುರ ಮಠ 700 ವರ್ಷಗಳ ಇತಿಹಾಸ ಹೊಂದಿದೆ. ಕರ್ನಾಟಕದಲ್ಲಿ ಮಠ ಮಾನ್ಯಗಳ ಸೇವೆ ಅಪೂರ್ವವಾದುದು. ಶಿಕ್ಷಣ ಸಂಸ್ಕೃತಿ, ಸಂಸ್ಕಾರ, ದಾಸೋಹವು ಮಹತ್ತರ ಸೇವಾ ಕಾರ್ಯವಾಗಿದೆ. ಶ್ರೀ ಶಿವಕುಮಾರ ಸ್ವಾಮೀಜಿ ಅವರಿಗೆ ಧರ್ಮರಾಜೇಂದ್ರ ಸ್ವಾಮೀಜಿ ಅಚ್ಚುಮೆಚ್ಚಿನ ಶಿಷ್ಯರಾಗಿದ್ದರು. ಅದೇ ರೀತಿ ನಿರಂಜನ ಸ್ವಾಮೀಜಿ ಈ ಭಾಗದಲ್ಲಿ ಉತ್ತಮ ಕೆಲಸಗಳ ಮೂಲಕ ಚಿರಪರಿಚಿತರಾಗಿದ್ದು ಸತ್ಕಾರ್ಯಗಳ ಮೂಲಕ ಮಠದ ಕೀರ್ತಿ ಹೆಚ್ಚಿಸಬೇಕೆಂದರು.

ಸಂಸದ ಶ್ರೇಯಸ್ ಪಟೇಲ್ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಶ್ರೀ ಮಠದ ಬಗ್ಗೆ ನನಗೆ ಅತೀವ ಗೌರವವಿದೆ. ಸುತ್ತೂರು ಹಾಗು ಸಿದ್ದಗಂಗಾ ಸ್ವಾಮೀಜಿ ಅವರೊಂದಿಗೆ ವೇದಿಕೆ ಹಂಚಿಕೊಂಡಿದ್ದು ನನ್ನ ಪೂರ್ವ ಜನ್ಮದ ಪುಣ್ಯ ಎಂದು ಭಾವಿಸುತ್ತೇನೆ. ಮಠದ ಅಭಿವೃದ್ಧಿಗೆ ಕೈಲಾದ ನೆರವು ನೀಡುತ್ತೇನೆಂದರು.

ಮಾಜಿ ಸಚಿವ ಕೆ.ಗೋಪಾಲಯ್ಯ ಅವರು ಮಾತನಾಡಿ, ನೂರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುತ್ತಿರುವ ಶ್ರೀ ಮಠದ ಶಾಲೆಗೆ ಸಹಾಯ ಮಾಡುತ್ತೇನೆ. ಪ್ರತಿವರ್ಷ ಕಾರ್ತಿಕ ಮಾಸದಲ್ಲಿ 1 ಲಕ್ಷ ರೂ. ದೇಣಿಗೆ ನೀಡುತ್ತೇನೆಂದು ಭರವಸೆ ನೀಡಿದರು.

ಶಾಸಕ ಸಿಮೆಂಟ್ ಮಂಜು ಶ್ರೀ ಮಠದ ದ್ವಾರ ಬಾಗಿಲು ಉದ್ಘಾಟನೆ ಮಾಡಿದರು. ಕನಕಪುರ ದೇಗುಲ ಮಠದ ಡಾ. ಶ್ರೀ ಚನ್ನಬಸವ ಸ್ವಾಮೀಜಿ, ತಣ್ಣೀರುಹಳ್ಳ ಮಠದ ಶ್ರೀ ವಿಜಯಕುಮಾರ ಸ್ವಾಮೀಜಿ, ಸಂಕಲಾಪುರ-ಕಲ್ಲುಮಠದ ಶ್ರೀ ಧರ್ಮರಾಜೇಂದ್ರ ಸ್ವಾಮೀಜಿ, ಶ್ರೀ ಶಾಂತವೀರ ಮಲ್ಲಿಕಾರ್ಜುನ ಶ್ರೀ, ಶಾಸಕ ಹೆಚ್.ಕೆ.ಸುರೇಶ್, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ನಿವೃತ್ತ ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಎಂ.ಡಿ.ಕಾಂತರಾಜು ಮತ್ತಿತರರಿದ್ದರು.

ಮೀಸಲಾತಿ ಶೇ. 70-75ಕ್ಕೆ ಹೆಚ್ಚಿಸುವ ಇಂಗಿತ

• ಪ್ರಜೋದಯ ವರದ

ಶ್ರೇಷ್ಠ

ಆಹಾ! ಎಂತಹ ಶ್ರೇಷ್ಠ ಗುಣ ಎಂದು ಹೊಗಳುವುದನ್ನು ಕೇಳಿದ್ದೇವೆ. ''ಗುಣ'' ಕ್ಕೆ ''ಶ್ರೇಷ್ಠ'' ವಿಶೇಷಣ ಸೇರಿಸುವಂತೆ ಮಾತು, ಕೆಲಸ, ವ್ಯಕ್ತಿ, ವಿಚಾರಗಳಿಗೂ ಶ್ರೇಷ್ಠ ವಿಶೇಷಣವನ್ನು ಹಾಕುತ್ತಾರೆ. ಶ್ರೇಷ್ಠ ಆಡುಗೆಯವರು, ಶ್ರೇಷ್ಠ ಕಲಾವಿದರು, ಶ್ರೇಷ್ಠ ದಾನಿಗಳು, ಶ್ರೇಷ್ಠ ಶಿಲ್ಪ ಮುಂತಾದ ಕಡೆ ನಾವು ಕಾಣುವ ಶ್ರೇಷ್ಠ ಎಂಬ ಪದಕ್ಕೆ ಅತ್ಯಂತ ಉತ್ತಮವಾದುದೆಂದು ಅರ್ಥ. ಶ್ರೇಷ್ಠತೆಯನ್ನು ಅರಸುವ ಆಳತೆಗೋಲು ಯಾವುದು? ಕಾರ್ಯಶೈಲಿ, ಮಾತಿನ ವೈಖರಿ ಮತ್ತು ಮಾತಿನಲ್ಲಿರುವ ವಿನಯ ಸಂಪನ್ನತೆ, ವಿಶಾಲ ಮನೋಗುಣ, ಸೇವಾ ಭಾವನೆ, ಶಿಸ್ತು ಮತ್ತು ಸಮಯಪಾಲನೆ ಹೀಗೆ ಹಲವಾರು ಬಾಹ್ಯ ಗೋಚರಿತ ಅಂಶಗಳನ್ನು ಗಮನಿಸಿ ಶ್ರೇಷ್ಠತೆಯ ಪಟ್ಟ ಕೊಡುತ್ತಾರೆ. ಅಂತರಂಗವನ್ನು ಯಾರಿಂದಲೂ ಇಣುಕಿ ನೋಡಲಾಗುವುದಿಲ್ಲವಲ್ಲ! ಬಹಿರಂಗದಲ್ಲಿ ಗಮನಕ್ಕೆ ಬರುವ ಗುಣಗಳ ಆಧಾರದಿಂದ ಶ್ರೇಷ್ಠವೆಂದು ಹೊಗಳಲ್ಪಡುವ ಗುಣವರ್ಣನೆಯು ಭವಿಷ್ಯದಲ್ಲಿ ತದ್ವಿರುದ್ಧಗೊಂಡು ಅವಮಾನಕ್ಕೊಳಗಾಗಬಹುದೆಂಬ ಎಚ್ಚರಿಕೆಯೂ ಅಗತ್ಯ.

ಮಾತಿನಿಂದ ಒಬ್ಬನ ಶ್ರೇಷ್ಠತೆ ಅರಿವಾಗುತ್ತದೆ ಎನ್ನುವರು. ವಿನಯದ ಮಾತು, ಗೌರವ ಪೂರ್ಣ ಮಾತು, ಪ್ರಸನ್ನತೆ ಬೆರೆತ ಮಾತು, ಮೃದು ಮಾತು.. ಇವೆಲ್ಲ ಸುಂದರ ಮಾತಿನ ಲಕ್ಷಣಗಳು. ಇತರರನ್ನು ಹಂಗಿಸುವ ಅಥವಾ ಮಾತಿನಲ್ಲಿ ಉಡಾಫೆ ತೋರುವ, ನಿರುತ್ಸಾಹ ತೋರುವ, ಬೂಟಾಟಿಕೆ ತುಂಬಿರುವ ಮಾತುಗಳು, ಸ್ವಪ್ರತಿಷ್ಠೆ ಮೆರೆಯುವ ಮಾತುಗಳು, ಅಹಂ ಭರಿತ ಮಾತುಗಳು ಮನದೊಳಗಿನ ಕುರೂಪಕ್ಕೆ ಕನ್ನಡಿಯಾಗುತ್ತವೆ. ಅಂತರಂಗದ ಸ್ವರೂಪವು ಮಾತಿನಲ್ಲಿ ಪ್ರತಿಬಿಂಬಿಸಲ್ಪಡುತ್ತದೆಂಬುದನ್ನು ಎಲ್ಲರೂ ಒಪ್ಪುತ್ತಾರೆ.

ಹಾಲು ಶುದ್ಧವಾಗಿದ್ದು ಪಾತ್ರೆ ಶುದ್ಧವಾಗದೇ ಇದ್ದರೆ ಹಾಲು ಕೆಡುತ್ತದೆ. ಮಾತು ಹಾಲಿನಂತೆ. ಸ್ವಲ್ಪ ಹುಳಿಯ ಲೇಪನವಿದ್ದರೂ ಹಾಳು ಎನಿಸಿಕೊಳ್ಳುತ್ತದೆ. ಮಾತಿನ ಶುದ್ಧತೆಯನ್ನುಳಿಸಿ ಕೊಳ್ಳುವುದಕ್ಕಾಗಿ ಮನಸ್ಸೆಂಬ ಪಾತ್ರೆಯ ಶುದ್ಧತೆಯೂ ಅಗತ್ಯ. ನುಡಿದಂತೆ ನಡೆಯುವ, ನಡೆದಂತೆ ನುಡಿಯುವ ಗುಣವೇ ಶ್ರೇಷ್ಠತೆಯ ಲಕ್ಷಣ. ಆದರೆ ನುಡಿ ನಡೆಗಳೆರಡರ ನಡುವೆ ಸಾಮ್ಯತೆ ಮಾನವನಲ್ಲಿ ಸಹಜವಾಗಿರುವುದಿಲ್ಲ. ಏರುಪೇರುಗಳು ಹೆಚ್ಚಿದಂತೆ ಶ್ರೇಷ್ಠತೆಯ ಮಟ್ಟ ಕುಸಿಯಲಾರಂಭಿಸುತ್ತದೆ. ಮಿಥ್ಯ, ಸತ್ಯ, ಪಥ್ಯ ಮತ್ತು ಮಿತ ಮಾತುಗಳೆಂದು ವಿವಿಧ ವರಸೆಯ ಮಾತುಗಳಿವೆ. ಪಥ್ಯವೆಂದರೆ ಹಿತಕರವಾಗಿರುವ ಮಾತುಗಳು. ಕೆಲವೊಮ್ಮೆ ಹಿತವಾಗಲೆಂದು ನೈಜತೆಗೆ ಹತ್ತಿರವೆನಿಸುವ ಸಂಪೂರ್ಣ ಅಸತ್ಯವೂ ಅಲ್ಲದ ಮಾತುಗಳಿಂದ ಓಲೈಸುವವರಿದ್ದಾರೆ. ಅಂತಹವರೂ ಶ್ರೇಷ್ಠತೆಗಿಂತ ದೂರವಿರುವವರೆಂದೇ ತಿಳಿಯಬೇಕು. ಮಿಥ್ಯ ಮಾತುಗಾರರಂತೂ ಎಂದಿಗೂ ಶ್ರೇಷ್ಠರಾಗುವುದೇ ಇಲ್ಲ. ಕಹಿಯಾಗಿರಲಿ, ಸಿಹಿಯಾಗಿರಲಿ ತಾನು ಸತ್ಯವನ್ನೇ ಹೇಳುವೆ ಎಂಬುವನನ್ನು ಶ್ರೇಷ್ಠ ಎನ್ನಬಹುದು. ಕೆಲವೊಮ್ಮೆ ಸಂಪೂರ್ಣ ಸತ್ಯವಾದ ಮಾತು ಇತರರನ್ನು ಅವಮಾನಿಸುತ್ತದೆ, ಘಾಸಿಗೊಳಿಸುತ್ತದೆ ಅಥವಾ ಪ್ರಾಣಾಪಯಕ್ಕೆ ಕಾರಣವಾಗುತ್ತದೆ ಎಂದಿದ್ದರೆ ಸತ್ಯವನ್ನು ಮರೆ ಮಾಚುವುದರಿಂದ ಶ್ರೇಷ್ಠತೆ ಉಳಿಯುತ್ತದೆ, ಆದರೆ ಇದು ಮೆಚ್ಚಿಸಲೆಂದು ಹೇಳುವ ಮಿಥ್ಯವಾಗಬಾರದು. ಮಾಡುವ ಕಾರ್ಯ ಮತ್ತು ಕರ್ತವ್ಯಗಳನ್ನು ಆಧರಿಸಿಯೂ ಶ್ರೇಷ್ಠತೆಯನ್ನು ಗುರುತಿಸಲಾಗುತ್ತದೆ. ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ಅಥವಾ ಶೈಕ್ಷಣಿಕ ನೆರವು, ಬಡವರಿಗೆ ಸಹಾಯ, ರೋಗಿಗಳಿಗೆ ನೆರವು, ಆಕಸ್ಮಿಕ ದುರಂತಗಳಿಗೀಡಾದಾಗ ನೀಡುವ ಸಹಾಯ ಹೀಗೆ ಹಲವಾರು ಸೇವಾಕಾರ್ಯಗಳಿರುತ್ತವೆ. ಇವೆಲ್ಲವೂ ಉದಾರ ಮನಸ್ಸಿನ ಸೇವೆಗಳಾಗಿದ್ದು ವ್ಯಕ್ತಿಗೆ ಭೂಷಣಕಾರಕವಾಗುತ್ತವೆ. ಹಾಗೆಯೇ ಪ್ರಾರ್ಥನಾ ಮಂದಿರಗಳಿಗೆ, ಶಾಲೆಗಳಿಗೆ, ಸಾರ್ವಜನಿಕ ಉದ್ದೇಶದ ಕೆಲಸಗಳಿಗೆ ಧನ ಸಹಾಯ ಮಾಡುವವರೂ ಇರುತ್ತಾರೆ. ಇವರೆಲ್ಲರೂ ಶ್ರೇಷ್ಠರ ಸಾಲಿಗೆ ಸೇರುತ್ತಾರೆ. ಧನಸಹಾಯ ಮಾಡುವವರು ಪ್ರಸಿದ್ಧಿಯನ್ನು ಹಂಬಲಿಸಿದರೆ ಶ್ರೇಷ್ಠತೆಯ ಮೆರುಗು ಕಡಿಮೆಯಾಗುತ್ತದೆ.

ಇತ್ತೀಚೆಗೆ ನಿಧನರಾದ ಸಾಲು ಮರದ ತಿಮ್ಮಕ್ಕ ಶ್ರೇಷ್ಠ ವ್ಯಕ್ತಿ. ಅವರು ಸಮಾಜದ ಹಿತಕ್ಕಾಗಿ ಗಿಡ ಮರಗಳನ್ನು ನೆಟ್ಟು ಸಾಕಿ ಬೆಳೆಸಿದರು. ಇದು ಸಮಾಜಕ್ಕೆ ನೀರುಣಿಸಿದ, ಆಮ್ಲಜನಕ ಪೂರೈಸಿದ, ಉರುವಲು ಒದಗಿಸಿದ, ಪ್ರಾಣಿ ಪಕ್ಷಿಗಳೂ ಸೇರಿದಂತೆ ಜೀವಿಗಳಿಗೆ ಹಣ್ಣು ಹಂಪಲು ತಿನಿಸಿದ ಪುಣ್ಯದಾಯಕವಾದ ಸೇವಾ ಕೆಲಸವಾಗಿದೆ. ಅಂತಹ ಶ್ರೇಷ್ಠ ಕೆಲಸ ಮಾಡುವ ಅಸಂಖ್ಯ ಶ್ರೇಷ್ಠರೂ ನಮ್ಮ ನಡುವೆ ಇದ್ದಾರೆ. ಶ್ರೇಷ್ಠತೆಯು ಸಂಪತ್ತು, ರೂಪ, ಜಾತಿ, ಮತ, ಪಕ್ಷ ಅಥವಾ ಬಲ ಮತ್ತು ಅಧಿಕಾರಗಳಿಂದ ಬಾರದು. ಇವು

ಕೆಲವೊಮ್ಮೆ ಸಣ್ಣದಾದ ಪೂರಕ ಅಂಶಗಳಾಗಬಹುದಷ್ಟೇ. ಅಷ್ಟಾವಕ್ರನು ಶ್ರೇಷ್ಠನಾದ. ಅವನು ಸುರೂಪಿಯಲ್ಲ, ಆದರೆ ಜ್ಞಾನಿ. ಅಬ್ದುಲ್ ಕಲಾಂ ನೋಡಲು ಬಹಳ ಅಂದಗಾರನಲ್ಲ, ಆದರೆ ವಿಶ್ವಶ್ರೇಷ್ಠರಾದರು. ನಾವೂ ಅತ್ಯುತ್ತಮ ಕೆಲಸ ಮಾಡಿ ಶ್ರೇಷ್ಠ ವ್ಯಕ್ತಿತ್ವನ್ನು ನಮ್ಮಲ್ಲಿ ಬೆಳೆಸೋಣ.

– ರಮೇಶ ಎಂ. ಬಾಯಾರು, ಬಂಟ್ವಾಳ

20-11-2025 ದಿನ ಭವಿಷ್ಯ

ಮೇಷ: ತುಂಬಾ ಚಿಂತೆ ಮತ್ತು ಒತ್ತಡ ರಕ್ತದೊತ್ತಡವನ್ನು ಉಂಟುಮಾಡಬಹುದು. ಆಲೋಚಿಸದೆ ನೀವು ಯಾರಿಗೂ ತಮ್ಮ ಹಣವನ್ನು ಕೊಡಬಾರದು, ಇಲ್ಲದಿದ್ದರೆ ನೀವು ಮುಂಬರುವ ಸಮಯದಲ್ಲಿ ದೊಡ್ಡ ತೊದರೆಗೊಳಗಾಗಬಹುದು. ನಿಮ್ಮ ನಾಲಗೆ ನಿಮ್ಮ ಅಜ್ಜ ಅಜ್ಜಿಯಂದಿರ ಭಾವನೆಗಳಿಗೆ ಘಾಸಿ ಮಾಡುವುದರಿಂದ ನಿಮ್ಮ ಭಾಷೆಯನ್ನು ನಿಯಂತ್ರಿಸಿ.

ವೃಷಭ: ನಿಮ್ಮ ಬಾಲ್ಯದ ನೆನಪುಗಳು ನಿಮ್ಮನ್ನು ಆವರಿಸಿಕೊಳ್ಳುತ್ತವೆ. ಈ ಪ್ರಕ್ರಿಯೆಯಲ್ಲಿ ನಿಮಗೆ ನೀವೇ ಅನಗತ್ಯ ಮಾನಸಿಕ ಒತ್ತಡ ನೀಡಬಹುದು. ನಿಮ್ಮ ಪ್ರಮುಖ ಆತಂಕ ಮತ್ತು ಒತ್ತಡದ ಒಂದು ಕಾರಣವೆಂದರೆ ಕೆಲಮೊಮ್ಮೆಯಾದರೂ ನೀವು ಮಗುವಿನಂತಿರುವ ಸಾಮರ್ಥ್ಯವನ್ನು ಕಳೆದುಕೊಂಡಿದ್ದೀರಿ ಎಂದು ಚಿಂತಿಸುವುದಾಗಿದೆ.

ಮಿಥುನ: ಮೋಜಿಗಾಗಿ ಹೊರಹೋಗುವವರಿಗೆ ಸಂತೋಷ ಮತ್ತು ಆನಂದವನ್ನು ಹಂಚಿಕೊಳ್ಳಿ. ಸಂಶಯಾಸ್ಪದ ಹಣಕಾಸು ವ್ಯವಹಾರಗಳಲ್ಲಿ ಸಿಲುಕಿಕೊಳ್ಳದಂತೆ ಎಚ್ಚರಿಕೆ ವಹಿಸಿ. ಸಂಗಾತಿಯು ಸಂತೋಷ ನೀಡಲು ಪ್ರಯತ್ನ ಮಾಡಿದಾಗಿನ ಪೂರ್ಣ ಸಂತೋಷದ ಒಂದು ದಿನ. ನಿಮ್ಮ ಪ್ರೀತಿಪಾತ್ರರೊಡನೆ ನಿಮ್ಮ ವೈಯಕ್ತಿಕ ಭಾವನೆಗಳು/ರಹಸ್ಯಗಳನ್ನು ಹಂಚಿಕೊಳ್ಳಲು ಸರಿಯಾದ ಸಮಯವಲ್ಲ.

ಕರ್ಕಾಟಕ: ಮಕ್ಕಳ ಸಂಘದಲ್ಲಿ ಶಾಂತಿ ಪಡೆಯಿರಿ. ನಿಮ್ಮ ಸ್ವಂತದ್ದಷ್ಟೇ ಅಲ್ಲದೇ ಬೇರಯವರ ಮಕ್ಕಳ ಚಿಕಿತ್ಸಕ ಶಕ್ತಿಗಳೂ ನಿಮಗೆ ಸಾಂತ್ವನ ನೀಡಬಹುದು ಮತ್ತು ನಿಮ್ಮ ಆತಂಕವನ್ನು ಶಮನಗೊಳಿಸಬಹುದು. ಕುಟುಂಬದ ಯಾವುದೇ ಸದಸ್ಯರ ಕಾಯಿಲೆ ಬೀಳುವ ಕಾರಣದಿಂದಾಗಿ ನೀವು ಆರ್ಥಿಕ ತೊಂದರೆಗೊಳಗಾಗಬಹುದು.

ಸಿಂಹ: ಇಂದು ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ಕುಟುಂಬದ ಯಾವುದೇ ಸದಸ್ಯರ ಕಾಯಿಲೆ ಬೀಳುವ ಕಾರಣದಿಂದಾಗಿ ನೀವು ಆರ್ಥಿಕ ತೊಂದರೆಗೊಳಗಾಗಬಹುದು. ಆದಾಗ್ಯೂ ಈ ಸಮಯದಲ್ಲಿ ನೀವು ಹಣಕ್ಕಿಂತ ಹೆಚ್ಚಾಗಿ ಅವರ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಪ್ರೀತಿ ನಿಮಗಾಗಿ ಗಾಳಿಯಲ್ಲಿದೆ. ಸುತ್ತಲೂ ನೋಡಿ ಎಲ್ಲವೂ ಗುಲಾಬಿಯಾಗಿದೆ.

ಕನ್ಯಾ: ಇಂದು ನೀವು ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಮತ್ತು ಆನಂದಿಸಲು ಸೂಕ್ತ ಮನೋಭಾವದಲ್ಲಿರುತ್ತೀರಿ. ಆರ್ಥಿಕ ಭಾಗವು ಬಲಗೊಳ್ಳುವ ಪೂರ್ಣ ಸಾಧ್ಯತೆ ಇದೆ. ನೀವು ಯಾವುದೇ ವ್ಯಕ್ತಿಗೆ ಸಾಲ ನೀಡಿದ್ದರೆ, ಇಂದು ನೀವು ಆ ಹಣವನ್ನು ಮರಳಿ ಪಡೆಯುವ ನಿರೀಕ್ಷೆಯಿದೆ ಇಂದು ಕೆಲಸ ಒತ್ತಡ ಮತ್ತು ಸುಸ್ತಿನಿಂದ ಕೂಡಿರುತ್ತದೆ.

ತುಲಾ: ಇಂದಿನ ಮನರಂಜನೆ ಕ್ರೀಡಾ ಚಟುವಟಿಕೆಗಳು ಮತ್ತು ಹೊರಾಂಗಣ ಕಾರ್ಯಕ್ರಮಗಳನ್ನು ಒಳಗೊಂಡಿರಬೇಕು. ಹಣವನ್ನು ಯೋಚಿಸದೆ ಮತ್ತು ಪರಿಗಣಿಸದೆ ಖರ್ಚುಮಾಡುವುದು, ನಿಮಗೆ ಎಷ್ಟು ನಷ್ಟ ಮಾಡಬಹದು ಎಂಬುದು ಇಂದು ನಿಮಗೆ ಅರ್ಥವಾಗಬಹುದು.

ವೃಶ್ಚಿಕ: ನಿಮಗೇನು ಒಳ್ಳೆಯದೆಂದು ನಿಮಗೆ ಮಾತ್ರ ಗೊತ್ತು – ಆದ್ದರಿಂದ ಧೃಢವಾಗಿರಿ ಮತ್ತು ಧೈರ್ಯಶಾಲಿಗಳಾಗಿರಿ ಮತ್ತು ತಕ್ಷಣದ ನಿರ್ಧಾರಗಳನ್ನು ತೆಗೆದುಕೊಳ್ಳಿ ಹಾಗೂ ಫಲಿತಾಂಶಗಳಿಗೆ ಸಿದ್ಧವಾಗಿರಿ. ನೀವು ಕಮಿಷನ್‌ಗಳಿಂದ ಡಿವಿಡೆಂಡ್‌ಗಳಿಂದ- ಅಥವಾ ರಾಯಧನಗಳಿಂದ ಪ್ರಯೋಜನ ಪಡೆಯುತ್ತೀರಿ. ನಿಮ್ಮ ಸಾಮಾಜಿಕ ಜೀವನವನ್ನು ನಿರ್ಲಕ್ಷಿಸಬೇಡಿ.

ಧನು: ನಿಮ್ಮಲ್ಲಿ ಶಕ್ತಿಯ ಕೊರತೆಯಿರದೇ ಆತ್ಮವಿಶ್ವಾಸದ ಕೊರತೆಯಿರುವುದರಿಂದ ನಿಮ್ಮ ನಿಜವಾದ ಸಾಮರ್ಥ್ಯವನ್ನು ಅರಿತುಕೊಳ್ಳಿ. ಯಾವುದೇ ಸಮಯದಲ್ಲಿ ಹಣದ ಅಗತ್ಯವಿರುತ್ತದೆ ಆದ್ದರಿಂದ ಇಂದು ಸಾಧ್ಯವಾದಷ್ಟು ನಿಮ್ಮ ಹಣವನ್ನು ಸಂಗ್ರಹಿಸುವ ಬಗ್ಗೆ ಆಲೋಚಿಸಿ. ನಿಮ್ಮ ಸಹಾನುಭೂತಿ ಮತ್ತು ತಿಳುವಳಿಕೆಗೆ ಪ್ರತಿಫಲ ದೊರಕುತ್ತದೆ.

ಮಕರ: ಸ್ನೇಹಿತರೊಂದಿಗಿನ ಸಂಜೆ ಆಹ್ಲಾದಕರವಾಗಿದ್ದರೂ ವಿಪರೀತ ತಿನ್ನುವುದು ಮತ್ತು ಹಾರ್ಡ್ ಡ್ರಿಂಕ್‌ಗಳ ಬಗ್ಗೆ ಎಚ್ಚರಿಕೆಯಿಂದಿರಿ. ಇಂದು ನೀವು ನಿಮ್ಮ ಹಣವನ್ನು ಖರ್ಚು ಮಾಡುವ ಅಗತ್ಯವಿಲ್ಲ, ಏಕೆಂದರೆ ಮನೆಯ ಯಾವುದೇ ಹಿರಿಯ ಸದಸ್ಯ ಇಂದು ನಿಮಗೆ ಹಣವನ್ನು ನೀಡಬಹುದು. ನಿಮ್ಮ ಮಕ್ಕಳು ನಿಮ್ಮ ಉದಾರ ವರ್ತನೆಯ ದುರುಪಯೋಗ ಮಾಡಲು ಬಿಡಬೇಡಿ.

ಕುಂಭ: ಕ್ರೀಡೆಗಳು ಸಾರ್ವಕಾಲಿಕ ಯೌವನದ ರಹಸ್ಯವಾಗಿದ್ದರಿಂದ ಯಾವುದಾದರೂ ಆಟಗಳಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ. ಲೋನ್ ತೆಗೆದುಕೊಂಡಿರುವ ಜನರಿಗೆ ಲೋನ್‌ನ ಮೊತ್ತವನ್ನು ಮರುಪಾವತಿಸುವಲ್ಲಿ ತೊಂದರೆಗಳು ಉಂಟಾಗಬಹುದು. ನೀವು ಕಾಳಜಿ ವಹಿಸುವ ಯಾರಾದರ ಜೊತೆಗಿನ ಸಂವಹನದ ಕೊರತೆ ನಿಮಗೆ ಖಿನ್ನತೆಯನ್ನು ಉಂಟುಮಾಡುತ್ತದೆ.

ಮೀನ: ಹೊರಾಂಗಣ ಕ್ರೀಡೆ ನಿಮ್ಮನ್ನು ಸೆಳೆಯುತ್ತದೆ-ಧ್ಯಾನ ಮತ್ತು ಯೋಗ ಲಾಭ ತರುತ್ತವೆ. ಇಂದು ಹಣಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಯನ್ನು ಹೊಂದಿರುವ ಸಾಧ್ಯತೆ ಇದೆ ಆದರೆ ನಿಮ್ಮ ಬುದ್ಧಿವಂತಿಕೆಯಿಂದ ಈ ಹಾನಿಯನ್ನು ಲಾಭದಲ್ಲಿ ಪರಿವರ್ತಿಸಬಹುದು ಮಕ್ಕಳು ನಿಮಗೆ ಮನೆಕೆಲಸಗಳನ್ನು ಮಾಡಲು ಸಹಾಯ ಮಾಡುತ್ತಾರೆ.

ಸಿಡಿಮದ್ದು ಸ್ಫೋಟಕ್ಕೆ ಕಬ್ಬಿಣದ ಸರಳು ಮಿದುಳನ್ನು ಹೊಕ್ಕಿತು!

> ರೈಲು ಮಾರ್ಗವನ್ನು ನಿರ್ಮಿಸಲು ಅಡ್ಡ ಬರುತ್ತಿದ್ದ ಎಲ್ಲ ಬಂಡೆಗಳನ್ನು ಸಿಡಿಸಬೇಕಿತ್ತು. ಈ ಕೆಲಸವನ್ನು ಮಾಡುವುದರಲ್ಲಿ ಗೇಜ್ ಪರಿಣತನಾಗಿದ್ದ. ಮೊದಲು ಭೈರಿಗೆಯ ನೆರವಿನಿಂದ ಬಂಡೆಯಲ್ಲಿ ಒಂದು ಕುಣಿಯನ್ನು ಕೊರೆಯಬೇಕಿತ್ತು. ಆ ಕುಣಿಯೊಳಗೆ ಸಿಡಿಮದ್ದು (ಗನ್ ಪೌಡರ್) ತುಂಬಬೇಕಿತ್ತು. ಒಂದು ಫ್ಯೂಸ್ ಇಡಬೇಕಿತ್ತು.

ಹಿಂದಿರುಗಿ ನೋಡಿದಾಗ ಒಬ್ಬ ಮನುಷ್ಯನು ಮನಸ್ಸು ಮಾಡಿದರೆ ಇತಿಹಾಸವನ್ನು ಬದಲಾಯಿಸಬಹುದು. ಲ್ಯೂವೆನ್ ಹಾಕ್ ತನ್ನ ಸೂಕ್ಷ್ಮದರ್ಶಕದಿಂದ ಸೂಕ್ಷ್ಮಜೀವಿಗಳ ಲೋಕವನ್ನು ಅನಾವರಣ ಮಾಡಿದ. ಫ್ಲೆಮಿಂಗ್ ತನ್ನ ಸೂಕ್ಷ್ಮ ಅವಲೋಕನ ಸಾಮರ್ಥ್ಯದಿಂದ ಪ್ರತಿ ಜೈವಿಕಗಳನ್ನು ಸೃಜಿಸಿದ.

ಜೆನರ್, ತನ್ನ ಸಿದ್ಧಾಂತವನ್ನು ಕಾರ್ಯರೂಪಕ್ಕೆ ತಂದು ಲಸಿಕೆಯೆಂಬ ಬ್ರಹ್ಮಾಸ್ತ್ರವನ್ನು ಮನುಕುಲಕ್ಕೆ ನೀಡಿದ. ಹೀಗೆ ನಮ್ಮ ಇತಿಹಾಸ, ವಿಜ್ಞಾನ, ಸಾಹಿತ್ಯ, ರಾಜಕೀಯ ಮುಂತಾದ ಕ್ಷೇತ್ರಗಳಲ್ಲಿ ಜ್ಞಾನಕ್ಕೆ ಮಹಾತಿರುವುಗಳನ್ನು ನೀಡಿದ ಅನೇಕ ಮಹಾನುಭಾವರಿದ್ದಾರೆ. ಅಂಥವರಲ್ಲಿ ಒಬ್ಬ ಫೀನಿಯಸ್ ಪಿ.ಗೇಜ್ (1823-1869) ಎಂಬ ಕಾರ್ಮಿಕ. ಇವನು ಮನುಷ್ಯನ ಮಿದುಳಿನ ರಚನೆ ಮತ್ತು ಕಾರ್ಯವನ್ನು ತಿಳಿಯಲು ನೆರವಾಗುವುದರ ಜತೆಯಲ್ಲಿ ಮಿದುಳಿನ ಶಸ್ತ್ರಚಿಕಿತ್ಸೆಗಳನ್ನು ಯಶಸ್ವಿಯಾಗಿ ನಡೆಸಲು ಕಾರಣನಾದ.

ಸಿಡಿಮದ್ದು: ಸೆಪ್ಟೆಂಬರ್ 13, 1848. ಅಮೆರಿಕದ ನ್ಯೂಇಂಗ್ಲಂಡ್ ಜಿಲ್ಲೆಯ ವೆರ್ಮೊಂಟ್ ನಗರದ ಹೊರ ಅಂಚಿನದಲ್ಲಿದ್ದ ಗ್ರಾಮಾಂತರ ಪ್ರದೇಶ. ರೈಲು ರಸ್ತೆಯನ್ನು ನಿರ್ಮಿಸುತ್ತಿದ್ದರು. ಫೀನಿಯಸ್ ಗೇಜ್ ಎಂಬ ಇಪ್ಪತ್ತರ ವಯಸ್ಸಿನ ತರುಣ ಒಬ್ಬ ಸಮರ್ಥ ಮುಖ್ಯ ಕೆಲಸಗಾರನಾಗಿದ್ದ (ಫೈರ್‌ಮನ್), ಜನಪ್ರೀತಿಯನ್ನು ಗಳಿಸಿದ್ದ.

ರೈಲು ಮಾರ್ಗವನ್ನು ನಿರ್ಮಿಸಲು ಅಡ್ಡ ಬರುತ್ತಿದ್ದ ಎಲ್ಲ ಬಂಡೆಗಳನ್ನು ಸಿಡಿಸಬೇಕಿತ್ತು. ಈ ಕೆಲಸವನ್ನು ಮಾಡುವುದರಲ್ಲಿ ಗೇಜ್ ಪರಿಣತನಾಗಿದ್ದ. ಮೊದಲು ಭೈರಿಗೆಯ ನೆರವಿನಿಂದ ಬಂಡೆಯಲ್ಲಿ ಒಂದು ಕುಣಿಯನ್ನು ಕೊರೆಯಬೇಕಿತ್ತು. ಆ ಕುಣಿಯೊಳಗೆ ಸಿಡಿಮದ್ದು (ಗನ್ ಪೌಡರ್) ತುಂಬಬೇಕಿತ್ತು. ಒಂದು ಫ್ಯೂಸ್ ಇಡಬೇಕಿತ್ತು. ಆನಂತರ ಆ ಫ್ಯೂಸ್, ಸಿಡಿಮದ್ದು ಮತ್ತು ಗುಣಿಯ ಮೇಲೆ ಮರಳು ಅಥವಾ ಜೇಡಿಮಣ್ಣನ್ನು ಸುರಿದು ಒಟ್ಟಾಗಿ ಜಡಿಯಬೇಕಿತ್ತು.

ಹಾಗೆ ಜಡಿಯಲು 37 ಉದ್ದದ ಕಬ್ಬಿಣದ ಸರಳನ್ನು ಬಳಸುತ್ತಿದ್ದ. ಇದರ ವ್ಯಾಸ 1.25. ತೂಕ ಸುಮಾರು 6 ಕೆಜಿ. ಆನಂತರ ಫ್ಯೂಸಿಗೆ ಬೆಂಕಿಯನ್ನು ಹೊತ್ತಿಸಿ ದೂರ ಹೋಗುತ್ತಿದ್ದ. ಫ್ಯೂಸ್ ಉರಿದು ಸಿಡಿಮದ್ದನ್ನು ಸ್ಫೋಟಿಸುತ್ತಿತ್ತು. ಸೆಪ್ಟೆಂಬರ್ 13ರಂದು ಗೇಜ್ ಹೀಗೆ ಒಂದು ಕುಣಿಯಲ್ಲಿ ಸಿಡಿಮದ್ದನ್ನು ತುಂಬಿದ. ಫ್ಯೂಸನ್ನು ಇಟ್ಟ. ಅದರ ಮೇಲೆ ಮರಳು ಅಥವಾ ಜೇಡಿಮಣ್ಣನ್ನು ಮೆತ್ತಿ, ಆನಂತರ ತನ್ನ ಕಬ್ಬಿಣದ ಸರಳಿನಿಂದ ಜೇಡಿಮಣ್ಣನ್ನು ಒತ್ತಾಗಿ ಕುಟ್ಟಬೇಕಿತ್ತು.

ಬಹುಶಃ ಅವನು ಜೇಡಿಮಣ್ಣನ್ನು ಮೆತ್ತದೆ, ಕಬ್ಬಿಣದ ಸರಳಿನಿಂದ ಹಾಗೆಯೇ ಒತ್ತಾಗಿ ಕುಟ್ಟಲು ಪ್ರಯತ್ನಿಸಿದನೆಂದು ಕಾಣುತ್ತದೆ. ಕಬ್ಬಿಣದ ಸರಳು ಅಕಸ್ಮಾತ್ ಬಂಡೆಗೆ ತಾಗಿ ಒಂದು ಕಿಡಿ ಎದ್ದಿತು. ಆ ಕಿಡಿಯು ಸಿಡಿಮದ್ದನ್ನು ಸ್ಫೋಟಿಸಿತು. ಕೂಡಲೇ ಅವನ ಕೈ ಯಲ್ಲಿದ್ದ ಕಬ್ಬಿಣದ ಸರಳು ಒಂದು ಕ್ಷಿಪಣಿಯಂತೆ ಹಾರಿತು.

ಗೇಜ್‌ನ ಎಡೆಗೆನ್ನೆಯೊಳಗೆ ನುಗ್ಗಿ, ಬಾಯನ್ನು ಪ್ರವೇಶಿಸಿ, ತಾಲನ್ನು ಭೇದಿಸಿ, ಎಡಕಣ್ಣಿನ ಹಿಂಭಾಗದ ಮೂಲಕ ಮಿದುಳಿನ ಲಲಾಟ ಹಾಲೆಯಲ್ಲಿ (ಫ್ರಾಂಟಲ್ ಲೋಬ್) ತೂರಿ, ಕಪಾಲದ ಮೂಲಕ, ತನ್ನ ಅಕ್ಷದ ಮೆಲೆ ಸುತ್ತುತ್ತಾ, ಹೊರಬಂದಿತು. ಹಲವು ಮೀಟರ್ ಮೇಲಕ್ಕೆ ಹೋಯಿತು. ಆನಂತರ ಮೀಟರುಗಳ ದೂರದಲ್ಲಿ ನೆಲಕ್ಕೆ ಬಿತ್ತು!

ಆ ಸರಳು ರಕ್ತಸಿಕ್ತವಾಗಿತ್ತು ಹಾಗೂ ಅದಕ್ಕೆ ಮಿದುಳಿನ ತುಣುಕುಗಳು ಮೆತ್ತಿಕೊಂಡಿದ್ದವು. ಸಿಡಿಮದ್ದು ಸ್ಫೋಟಿಸಿದಾಗ, ಆತನ ಕಣ್ಣಿನ ಮುಂದೆ ಪ್ರಕಾಶಮಾನವಾದ ಬೆಳಕು ಕಂಡಿತು. ಹಠಾತ್ತನೆ ಹಿಂದಕ್ಕೆ ಯಾರೋ ದೂಡಿದಂತೆ ಆದಾಗ, ಸಂಪೂರ್ಣ ಗೊಂದಲವುಂಟಾಯಿತು. ಶಾಖ ಹಾಗೂ ಶಬ್ದಗಳ ಜತೆಯಲ್ಲಿ ಧಡ್ ಎಂದು ನೆಲಕ್ಕೆ ಬಿದ್ದ. ಪ್ರಜ್ಞೆಯೇನೂ ಹೋಗಲಿಲ್ಲ. ನೋವೂ ಆಗಲಿಲ್ಲ. ಆದರೆ ಸ್ವಲ್ಪ ಹೊತ್ತಿನಲ್ಲಿ ವಿಪರೀತ ನೋವು ಕಾಣಿಸಿ ಕೊಂಡಿತು.



ಏಕೆಂದರೆ ಮಿದುಳಿಗೆ ನೋವು ಗ್ರಾಹಕಗಳು (ಪೇಯ್ನ್ ರೆಸೆಪ್ಟಾರ್) ಇರುವುದಿಲ್ಲ. ಹಾಗಾಗಿ ಮಿದುಳಿಗೆ ಪೆಟ್ಟಾ

ಸಹಕಾರಿ ಕ್ಷೇತ್ರದಿಂದ ರೈತರ ಪ್ರಗತಿ ಸಾಧ್ಯ

ರಾಜಕೀಯ ಬದಿಗಿಟ್ಟು ಶ್ರಮಿಸಿದಲ್ಲಿ ಗ್ರಾಮೀಣ ಪ್ರದೇಶದಲ್ಲಿನ ಜನತೆಗೆ ಅನುಕೂಲ: ಶಾಸಕ ಸಿ.ಎನ್.ಬಾಲಕೃಷ್ಣ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಸಹಕಾರಿ ಸಂಘಗಳು ಬಲೀಷ್ಠವಾದಲ್ಲಿ ರೈತರಿಗೆ ಹೆಚ್ಚು ಸಹಕಾರಿಯಾಗಲಿದ್ದು, ಸಹಕಾರಿ ಸಂಘಗಳಲ್ಲಿ ಪಕ್ಷಾತೀತ ಹಾಗೂ ರಾಜಕೀಯವನ್ನು ಬದಿಗಿಟ್ಟು ಶ್ರಮಿಸಿದಲ್ಲಿ ಗ್ರಾಮೀಣ ಪ್ರದೇಶದಲ್ಲಿನ ಜನತೆಗೆ ಅನುಕೂಲವಾಗುತ್ತದೆ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ತಿಳಿಸಿದರು

ಪಟ್ಟಣದ ಟಿಪಿಸಿಎಂಎಸ್ ನ ಎದುರಿನ ಆವರಣದಲ್ಲಿ ಬುಧವಾರ ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ, ಹಾಸನ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ, ಹಾಸನ ಜಿಲ್ಲಾ ಸಹಕಾರ ಒಕ್ಕೂಟ ನಿ., ಹಾಸನ. ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳಿ ನಿ, ಚನ್ನರಾಯಪಟ್ಟಣ. ತಾಲ್ಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಹಾಲು ಉತ್ಪಾದಕರ ಸಹಕಾರ ಸಂಘಗಳು ಹಾಗೂ ತಾಲ್ಲೂಕಿನ ಎಲ್ಲಾ ವಿವಿಧ ಸಹಕಾರ ಸಂಘಗಳು, ಸಹಕಾರ ಆಡಳಿತ ಮತ್ತು ಲೆಕ್ಕ ಪರಿಶೋಧನಾ ಇಲಾಖೆ, ಹಾಸನ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ 72ನೇ ಅಖಿಲ ಭಾರತ ಸಹಕಾರ ಸಪ್ತಾಹ-2025 ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪರಸ್ಪರ ಸಹಕಾರದಿಂದ ಕೆಲಸ ಮಾಡಿದರೆ ಸಹಕಾರ ಕ್ಷೇತ್ರದಲ್ಲಿ ಯಶಸ್ಸು ಸಾಧಿಸುವ ಮೂಲಕ ಅಭಿವೃದ್ಧಿ ಪಥದಲ್ಲಿ ಸಾಗಲು ಸಾಗಬಹುದು, ಸಹಕಾರ ಕ್ಷೇತ್ರ ಪ್ರಗತಿ ಕಂಡರೆ ದೇಶದ ಆರ್ಥಿಕಾಭಿವೃದ್ಧಿ ನಾಗಾಲೋಟದಲ್ಲಿ ಸಾಗಲಿದ್ದು, ಇದನ್ನು ಅರಿತು ಸರ್ವರೂ ಮುನ್ನಡೆಯಬೇಕು ಎಂದು ಹೇಳಿದರು

ಗ್ರಾಮಾಂತರ ಪ್ರದೇಶದ ಆರ್ಥಿಕ ಚಟುವಟಿಕೆಗಳು ಸಹಕಾರ ಸಂಘದ ಮೇಲೆ ಅವಲಂಬಿತವಾಗಿದ್ದು, ಇದೊಂದು ಉತ್ತಮ ಬೆಳವಣಿಗೆ, ಪ್ರತಿ ವರ್ಷ ಸಹಕಾರ ಸಪ್ತಾಹ ನಡೆಸಿ ಆ ಕ್ಷೇತ್ರವನ್ನು ಉತ್ತೇಜಿಸಿ ಸಾಧಕರನ್ನು ಗುರುತಿಸಿ ಗೌರವಿಸುವ ಮೂಲಕ ಸರ್ವರಿಗೂ ಸಹಕಾರ ಸಂಘಗಳು ಮತ್ತು ಸಂಸ್ಥೆಗಳಿಂದ ದೊರೆಯುವ ಸವಲತ್ತುಗಳ ಬಗ್ಗೆ ಮನವರಿಕೆ ಮಾಡಿ ಕೊಡಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹಾಸನ ಹಾಲು ಒಕ್ಕೂಟದ ನಿವೃತ್ತ ವ್ಯವಸ್ಥಾಪಕ ನಿರ್ದೇಶಕ ಜಯಪ್ರಕಾಶ್ ಸಹಕಾರಿ ಕ್ಷೇತ್ರದ ತತ್ವಗಳು ಸಹಕಾರಿ ಕ್ಷೇತ್ರದ ಪ್ರಯೋಜನಗಳು ಸಹಕಾರಿ ಕ್ಷೇತ್ರದಲ್ಲಿ ಸದಸ್ಯರ ಪಾಲನ್ನು ಸವಿವರವಾಗಿ ವಿವರಿಸಿದರು. ಇದೇ ಸಂದರ್ಭದಲ್ಲಿ ಸಹಕಾರಿ ರತ್ನ ಪುರಸ್ಕೃತರನ್ನು ಹಾಗೂ ಸಹಕಾರಿ ಕ್ಷೇತ್ರದ ಸಾಧಕರನ್ನು ಸತ್ಕರಿಸಲಾಯಿತು.

ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಎಸ್.ಎಸ್. ಪ್ರಕಾಶ್, ನಿರ್ದೇಶಕ ಆರ್.ಟಿ.ದ್ಯಾವೇಗೌಡ, ಎಚ್‌ಡಿಸಿಸಿ ಬ್ಯಾಂಕ್‌ನ ಅಧ್ಯಕ್ಷ ಸೋಮನಹಳ್ಳಿ ನಾಗರಾಜು, ಉಪಾಧ್ಯಕ್ಷ ಶೇಖರಪ್ಪ, ರಾಜ್ಯ ಸಹಕಾರ ಮಾರಾಟ ಮಂಡಳಿಯ ನಿರ್ದೇಶಕ ಸಿ.ಎನ್.ಪುಟ್ಟಸ್ವಾಮಿಗೌಡ, ಹಾಸನ ಹಾಲು ಒಕ್ಕೂಟದ ನಿರ್ದೇಶಕಿ ವಸಂತ ಶಿವಣ್ಣ, ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆಯ ಅಧ್ಯಕ್ಷ ಸಿ.ಎನ್. ವೆಂಕಟೇಶ್, ಜಿಲ್ಲಾ ಸಹಕಾರ ಒಕ್ಕೂಟದ ಉಪಾಧ್ಯಕ್ಷ ಡಿಪಿ ಸೋಮೇಗೌಡ, ವಸತಿ ಮಹಾ ಮಂಡಳಿ ನಿರ್ದೇಶಕ ಸುರೇಶ್, ಹಾಸನ ಸಹಕಾರಿ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ಎಚ್.ಮಹೇಶ್, ವ್ಯವಸ್ಥಾಪಕಿ ಸೌಜನ್ಯ, ಸಹಕಾರಿ ಅಭಿವೃದ್ಧಿ ಅಧಿಕಾರಿ ವಿಜಯೇಂದ್ರ, ಟಿಎಪಿಸಿಎಂಎಸ್ ನ ಅಧ್ಯಕ್ಷ ಮೆಡಿಕಲ್ ವೆಂಕಟೇಶ್, ನಿರ್ದೇಶಕ ಅನಿಲ್ ಮರಗೂರು, ಹಿರಿಯ ಮುಖಂಡರಾದ ಪರಮದೇವರಾಜೇಗೌಡ, ಜಯರಾಮ್, ಪುಟ್ಟಸ್ವಾಮಿಗೌಡ, ತಾಲ್ಲೂಕಿನ ಎಲ್ಲಾ ಸಹಕಾರ ಸಂಘಗಳ ಅಧ್ಯಕ್ಷರು, ನಿರ್ದೇಶಕರು, ಸದಸ್ಯರು ಆಡಳಿತ ಮತ್ತು ಲೆಕ್ಕ ಪರಿಶೋಧನಾ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

ಶಿಕ್ಷಕರಸಂಘದಿಂದ ಸಮಾಲೋಚನೆ

• ಪ್ರಜೋದಯ ವರದಿ

ಹಾಸನ: ಸಮೀಪದ ಹನುಮಂತಪುರ ಸರ್ಕಾರಿ ಪ್ರೌಢಶಾಲೆಗೆ ಶಾಲಾ ಭೇಟಿಯ ಅಭಿಯಾನ ಅಂಗವಾಗಿ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಬಸವರಾಜ್ ಹಾಗು ಪದಾಧಿಕಾರಿಗಳು ಭೇಟಿ ನೀಡಿ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಬಿಸಿಯೂಟ ಸಿಬ್ಬಂದಿ ಜೊತೆಗೆ ಸಮಾಲೋಚನೆ ನಡೆಸಿದರು.

ಇದೇ ಸಂದರ್ಭದಲ್ಲಿ ದಿವಂಗತ ಸಾಲುಮರದ ತಿಮ್ಮಕ್ಕ ಅವರ ಸ್ಮರಣಾರ್ಥ ಶಾಲಾ ಆವರಣದಲ್ಲಿ ಗಿಡ ನೆಡಲಾಯಿತು.

ಮುಖ್ಯ ಶಿಕ್ಷಕ ಆನೀಸ್, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಕಾರ್ಯದರ್ಶಿ ಅನಂತರಾಜು, ಸಂಘಟನಾ ಕಾರ್ಯದರ್ಶಿ ಪಾಲಾಕ್ಷ, ಸಹಕಾರ್ಯದರ್ಶಿ ಕಮಲಾಕ್ಷ , ತಾಲ್ಲೂಕು ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಚಂದ್ರಶೇಖರ್, ಶಾಲೆಯ ಸಹ ಶಿಕ್ಷಕರು ಮತ್ತು ಸಿಬ್ಬಂದಿ ವರ್ಗ ಹಾಜರಿದ್ದರು.

ಸಾಧನೆಗೆ ಅಂಗವೈಫಲ್ಯ ಕಾರಣವಾಗಬಾರದು

• ಪ್ರಜೋದಯ ವರದಿ

ಆಲೂರು: ಸಾಧಿಸುವ ಛಲವಿರುವವರಿಗೆ ಅಂಗಾಂಗ ವೈಫಲ್ಯದ ಬಗ್ಗೆ ಚಿಂತನೆ ಮೂಡುವುದಿಲ್ಲ ಎಂದು ವಿಶ್ವೇಶ್ವರಯ್ಯ ಪಬ್ಲಿಕ್ ಶಾಲೆ ಮುಖ್ಯ ಶಿಕ್ಷಕಿ ಸಿ.ಎಸ್.ಪೂರ್ಣಿಮ ತಿಳಿಸಿದರು.

ಹಾಸನದಲ್ಲಿರುವ ಶ್ರೀ ಕೃಷ್ಣ ಅಂಧ ಮಕ್ಕಳ ಶಾಲೆಗೆ ವಿದ್ಯಾರ್ಥಿಗಳು ಬುಧವಾರ ಭೇಟಿ ನೀಡಿದ ಸಂದರ್ಭದಲ್ಲಿ ಮಾತನಾಡಿ, ದೇವರು ಮನುಷ್ಯನ ಒಂದು ಅಂಗವನ್ನು ಕಿತ್ತುಕೊಂಡರೆ, ಅದಕ್ಕಿಂತ ಹತ್ತುಪಟ್ಟು ಜ್ಞಾನಭಿವೃದ್ಧಿ ಕೊಡುತ್ತಾನೆ. ಯಾವುದೇ ಅಂಗ ವೈಫಲ್ಯವಿರುವ ಮಕ್ಕಳನ್ನು ಪೋಷಕರು ತಪ್ಪದೆ ಇಂತಹ ಶಾಲೆಗಳಿಗೆ ದಾಖಲಿಸಿ ಅವರಿಗೆ ಶಿಕ್ಷಣ ಕೊಡಿಸುವ ಮೂಲಕ ಸುಖ ಜೀವನ ನಡೆಸಲು ಮುಂದಾಗಬೇಕು. ಅಂಧ ಮಕ್ಕಳು ದೃಷ್ಟಯಿಂದ ಮಾತ್ರ ವಂಚಿತರಾಗಿದ್ದು, ಉಳಿದಂತೆ ಎಲ್ಲ ಚಟುವಟಿಕೆಗಳಲ್ಲಿ ಸಾಮಾನ್ಯರಿಗಿಂತ ಉತ್ತಮ ಚಟುವಟಿಕೆಯಲ್ಲಿ ತೊಡಗಿರುತ್ತಾರೆ ಎಂದರು.

ಕೃಷ್ಣ ಅಂಧಶಾಲೆ ಮುಖ್ಯ ಶಿಕ್ಷಕ ಸುರೇಶ್ ಅವರು ಮಾತನಾಡಿ, ಅಂಧ ಮತ್ತು ದೃಷ್ಟಿಹೀನ ಮಕ್ಕಳಿಗೆ ಎಂದಿಗೂ ವ್ಯಕ್ತಿ ದೇವರಾಗಿದ್ದಾರೆ. ಕೈ ತುತ್ತು ನೀಡಿ ಹೊಟ್ಟೆ ಹಸಿವನ್ನು ನೀಗಿಸಿ ಪ್ರಪಂಚವನ್ನು ನೋಡಲು ಅಸಾಧ್ಯವಾಗದ ಮಕ್ಕಳ ಮೊಗದಲ್ಲಿ ನಗು ಮೂಡಿಸುತ್ತಾರೆ. ಕಲಿಕೆ ವಿಧಾನದಲ್ಲಿ ಮಾತ್ರ ವ್ಯತ್ಯಾಸವಿದೆ. ಅಂಧ ಮಗು ಇತರ ಮಕ್ಕಳಿಗೆ ಬೈಲ್ ಲಿಪಿ ಮೂಲಕ ಶಿಕ್ಷಣ ನೀಡಲಾಗುತ್ತದೆ ಎಂದರು.

ಅಂಧ ಮಕ್ಕಳೊಂದಿಗೆ ಕೇಕ್ ಕತ್ತರಿಸಿ ಸಿಹಿ ವಿತರಿಸಲಾಯಿತು. ಮುಖ್ಯ ಶಿಕ್ಷಕ ಸುರೇಶ್, ಶಿಕ್ಷಕರಾದ ಎಸ್ತರ್, ಸುಗನ್ಯ, ಶಕುಂತಲಾ, ಮುಬಾರಕ್, ರಾಮಚಂದ್ರ ಇದ್ದರು.

ಯಾವುದೇ ಸವಲತ್ತು ಪಡೆಯಲು ಕಾರ್ಮಿಕರ ಕಾರ್ಡ್ ಕಡ್ಡಾಯ

• ಪ್ರಜೋದಯ ವರದಿ

ಬೇಲೂರು: ಕಾರ್ಮಿಕ ಇಲಾಖೆಯ ಯಾವುದೇ ಸೌಲಭ್ಯ ಪಡೆಯಬೇಕಾದರೆ ಕಾರ್ಮಿಕರ ಕಾರ್ಡ್ ಕಡ್ಡಾಯವಾಗಿ ಮಾಡಿಸಿಕೊಂಡಿರಬೇಕೆಂದು ಪುರಸಭೆ ಸದಸ್ಯ ಬಿ. ಗಿರೀಶ್ ಹೇಳಿದರು.

ಪಟ್ಟಣದ ನೆಹರೂನಗರದ ಗಣಪತಿ ಪ್ರತಿಷ್ಠಾಪನೆ ಆವರಣದಲ್ಲಿ ಹೊಯ್ಸಳ ಪೈಂಟರ್ ಕಾರ್ಮಿಕರ ಸಂಘದ 2ನೇ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಯಾವುದೇ ನಿರ್ಮಾಣ ಕಾರ್ಯದಲ್ಲಿ ಕಟ್ಟಡ ಕಾರ್ಮಿಕರ ಪಾತ್ರ ಮಹತ್ವವಾದುದು. ಕಾರ್ಮಿಕರ ಹಿತದೃಷ್ಟಿಯಿಂದ ಸರ್ಕಾರ ಅನೇಕ ಯೋಜನೆಗಳನ್ನು ರೂಪಿಸಿದೆ. ಸಂಘದ ಅಧ್ಯಕ್ಷರು ಇವುಗಳ ಬಗ್ಗೆ ಕಾರ್ಮಿಕರಿಗೆ ಪ್ರಚಾರ ಮಾಹಿತಿ ನೀಡುವ ಮೂಲಕ ಸವಲತ್ತು ಪಡೆಯುವಂತಾಗಬೇಕು ಎಂದರು.

ಪರ್ತಕರ್ತರ ಸಂಘದ ಕಾರ್ಯದರ್ಶಿ ಬಿ.ಬಿ. ಶಿವರಾಜ್ ಮಾತನಾಡಿ, ಕಾರ್ಮಿಕರೆಲ್ಲರಿಗೂ ಸರ್ಕಾರದ ಸೌಲಭ್ಯಗಳು ತಲುಪಿದಾಗ ಮಾತ್ರ ಯೋಜನೆಗೆ ಯಶಸ್ಸು ದೊರೆಯುತ್ತದೆ. ಸಂಘಟನೆಗಳು ಸೂಕ್ತ ಫಲಾನುಭವಿಗಳಿಗೆ ಸರ್ಕಾರದ ಸವಲತ್ತುಗಳು ದೊರೆಯುವಂತೆ ಸಂಘಟನೆಯ ಪ್ರಮುಖರು ಮಾಡಬೇಕು. ಕಾರ್ಮಿಕ ಇಲಾಖೆ ಅಧಿಕಾರಿಗಳು ಇಲಾಖೆಯ ಸೌಲಭ್ಯ ಬಗ್ಗೆ ಮಾಹಿತಿ ನೀಡಿ ಪಾರದರ್ಶಕವಾಗಿ ಪ್ರಾಮಾಣಿಕವಾಗಿ ಸವಲತ್ತುಗಳನ್ನು ಕಾರ್ಮಿಕರಿಗಷ್ಟೇ ನೀಡುವಂತಾಗಬೇಕು. ಶಾಸಕರ ಸಹಾಯ ಪಡೆದು ಪೈಂಟರ್ ಕಾರ್ಮಿಕರ ಸಂಘಕ್ಕೆ ನಿವೇಶನ ಪಡೆಯುವಂತಾಗಬೇಕೆಂದು ಹೇಳಿದರು.

ಡಾ. ರಾಜ್‌ಕುಮಾರ್ ಸಂಘದ ಅಧ್ಯಕ್ಷ ತೀರ್ಥಂಕರ್ ಮಾತನಾಡಿ, ಕಾರ್ಮಿಕರು ಒಗ್ಗಟ್ಟಿನಿಂದ ಸಂಘಟನೆ ಮತ್ತು ಸರ್ಕಾರದ ಸವಲತ್ತು ಪಡೆಯಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಸಂಘ ಶ್ರಮಿಸಬೇಕು ಎಂದರು.

ಕಾರ್ಮಿಕ ಇಲಾಖೆಯ ವಿಜಿಕುಮಾರ್ ಮಾತನಾಡಿ, ಕಾರ್ಮಿಕ ಇಲಾಖೆಯು ಸಂಘಟಿತ ಹಾಗು ಅಸಂಘಟಿತ ವಲಯದ ಕಾರ್ಮಿಕರಿಗು ಹಲವು ಸೌಲಭ್ಯಗಳನ್ನು ಹೊಂದಿದೆ.ಕಾರ್ಮಿಕರು ತಪ್ಪದೇ ತಾವು ಮಾಡುವ ಕೆಲಸಕ್ಕೆ ಸಂಬಂಧಿಸಿದ ಕಾರ್ಮಿಕ ಕಾರ್ಡ್ ಕಡ್ಡಾಯವಾಗಿ ಮಾಡಿಸಿಕೊಳ್ಳಬೇಕು. ಸರ್ಕಾರದಲ್ಲಿ ಅನೇಕ ಕಾರ್ಮಿಕರಿಗೆ ಸವಲತ್ತುಗಳಿದೆ. ಕಾರ್ಮಿಕರಿಗೆ ಆರೋಗ್ಯ ಸಮಸ್ಯೆಯಾದ ಸಂದರ್ಭದಲ್ಲಿ ಸರ್ಕಾರದಿಂದ 2 ಲಕ್ಷ ರೂ. ವರೆಗೆ ಉಚಿತವಾಗಿ ಚಿಕಿತ್ಸೆ ನೀಡಲಾಗುವುದು. ಜೊತೆಗೆ ವಿವಾಹದ ಸಂದರ್ಭದಲ್ಲಿ 60 ಸಾವಿರ ರೂ. ಧನಸಹಾಯ ಹಾಗು ಅನೇಕ ಸವಲತ್ತುಗಳನ್ನು ನೀಡಲಾಗುವುದು ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಪೈಂಟರ್ ಕಾರ್ಮಿಕರ ಸಂಘದ ಅಧ್ಯಕ್ಷ ಭರತ್, ಬಿದಿರು ಸಹಕಾರ ಸಂಘದ ತಾಲ್ಲೂಕು ಅಧ್ಯಕ್ಷ ಕೇಬಲ್ ವಿಜಯಕುಮಾರ್, ಉದ್ಯಮಿ ಅಬ್ರಾರ್, ಸಂಘದ ಚಲುವರಾಜ್, ಭೋಜೇಗೌಡ, ಸೋಮಶೇಖರ್, ಶ್ರೀನಿವಾಸ್, ಜಬ್ಬರ್, ಅಕ್ಬರ್, ಸತೀಶ್, ಮುಜ್ಜು, ಮನೋಜ್ ಸೇರಿದಂತೆ ಸಂಘದ ಸದಸ್ಯರು, ಕಾರ್ಮಿಕರು ಇದ್ದರು.

ರಸ್ತೆ ಕಾಮಗಾರಿಗೆ ಭೂಮಿಪೂಜೆ

• ಪ್ರಜೋದಯ ವರದಿ

ಬೇಲೂರು: ಚುನಾವಣೆ ಮೊದಲು ದೊಡ್ಡ ಬ್ಯಾಡಗೆರೆ, ಮುತ್ತುಗನ್ನೇ, ಮಲ್ಲನಹಳ್ಳಿ, ಹೆಬ್ಬಾಳು ಕೂಡು ರಸ್ತೆ ಹದಗೆಟ್ಟ ಕಾರಣ ಚುನಾವಣೆಯಲ್ಲಿ ಬೆಂಬಲ ನೀಡಿದರೆ ರಸ್ತೆ ಕಾಮಗಾರಿ ಮಾಡುತ್ತೇನೆ ಎಂದು ಆಸ್ವಾಸನೆ ನೀಡಿದ್ದೆ. ಅದರಂತೆ ಇಂದು ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸುತ್ತಿದ್ದೇನೆ ಎಂದು ಶಾಸಕ ಹೆಚ್.ಕೆ.ಸುರೇಶ್ ಅವರು ಹೇಳಿದರು.

ಯಗಚಿ ನೀರಾವರಿ ಯೋಜನೆಯಡಿಯಲ್ಲಿ 249.9 ಲಕ್ಷ ರೂ.ಗಳ ಅಂದಾಜು ಮೊತ್ತದ 1135 ಮೀಟರ್ ಹೆಬ್ಬಾಳು ಗ್ರಾಮ ಪಂಚಾಯಿತಿಯ ದೊಡ್ಡ ಬ್ಯಾಡಗೆರೆ, ಮುತ್ತುಗನ್ನೇ, ಮಲ್ಲಳ್ಳಿಗೆ ಸೇರುವ ಡಾಂಬರು ರಸ್ತೆಗೆ ಗುದ್ದಲಿ ಪೂಜೆ ನೆರವೇರಿಸಿ ನಂತರ ಮಾತನಾಡಿ, ಸುಮಾರು ಮೂರು ವರ್ಷಗಳ ಹಿಂದೆ ರಸ್ತೆ ತುಂಬಾ ಹದಗೆಟ್ಟಿತ್ತು. ಜನರು ಓಡಾಡಲು ಸಮಸ್ಯೆಯಾಗುತ್ತಿತ್ತು. ಚುನಾವಣೆ ಪೂರ್ವ ಈ ಬಾಗದ ಮತದಾರರು ತಮ್ಮ ಬೇಡಿಕೆಗಳನ್ನು ತಿಳಿಸಿದ್ದರು. ಚುನಾವಣೆಯಲ್ಲಿ ಹೆಬ್ಬಾಳು ಗ್ರಾಮ ಪಂಚಾಯತಿ ಸುತ್ತಮುತ್ತಲಿನ ಗ್ರಾಮದ ಜನರು ನನಗೆ ಬೆಂಬಲ ನೀಡಿದ್ದರು. ಅಂದು ನೀಡಿದ್ದ ಆಶ್ವಾಸನೆ ಇಂದು ಈಡೇರಿಸುತ್ತಿದ್ದೇನೆ. ಈ ಭಾಗದ ರೈತರು ತಮ್ಮ ಸರಕುಗಳನ್ನು ತರಲು ಹರಸಾಹಸ ಪಡಬೇಕಿತ್ತು. ಅದಕ್ಕೆ ಮುಕ್ತಿ ಇಂದು ಸಿಕ್ಕಿದ್ದು ಬೇಲೂರಿನ ಅಭಿವೃದ್ಧಿಯೇ ನನ್ನ ಮೊದಲ ಕೆಲಸ ಎಂದರು.

ತಾಲ್ಲೂಕು ಪಂಚಾಯತಿ ಮಾಜಿ ಅಧ್ಯಕ್ಷ ಪರ್ವತಯ್ಯ, ಹೆಬ್ಬಾಳು ಗ್ರಾಮ ಪಂಚಾಯತಿ ಸದಸ್ಯರಾದ ಗಂಗಾಧರಪ್ಪ, ದೇವೇಂದ್ರ, ಶಶಿಕಲಾ, ಗ್ರಾಮಸ್ಥರಾದ ದೊಡ್ಡ ವಿರೇಗೌಡ, ಮಲ್ಲಿಕಾರ್ಜುನ, ಗುತ್ತಿಗೆದಾರ ಜಯಮೂರ್ತಿ ಇನ್ನಿತರರು ಇದ್ದರು.

ನ.22 ರಂದು ಸಾಧಕರಿಗೆ ಸನ್ಮಾನ

• ಪ್ರಜೋದಯ ವರದಿ

ಅರಕಲಗೂಡು: ವಿಶ್ವ ಚೇತನ ಜೈಭೀಮ್ ಚಾರಿಟೆಬಲ್ ಟ್ರಸ್ಟ್ ಉದ್ಘಾಟನೆ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ನ.22 ರಂದು ಹಮ್ಮಿಕೊಂಡಿರುವುದಾಗಿ ಟ್ರಸ್ಟ್ ಅಧ್ಯಕ್ಷ ಎ.ಸಿ.ಕಿರಣ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ಪಟ್ಟಣದ ಶಿಕ್ಷಕರ ಭವನದಲ್ಲಿ ಬೆಳಿಗ್ಗೆ 11ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಉರಿಲಿಂಗಿ ಪೆದ್ದಿಮಠದ ಜ್ಞಾನ ಪ್ರಕಾಶ ಸ್ವಾಮೀಜಿ ಸಾನಿಧ್ಯ ವಹಿಸುವರು. ಶಾಸಕ ಎ.ಮಂಜು ಅಧ್ಯಕ್ಷತೆಯಲ್ಲಿ ಬೆಳಗಾವಿ ಪ್ರಾದೇಶಿಕ ಆಯುಕ್ತೆ ಕೆ.ಎಂ. ಜಾನಕಿ ಉದ್ಘಾಟಿಸುವರು. ಸಂಸದ ಶ್ರೇಯಸ್ ಪಟೇಲ್, ಮಾಜಿ ಶಾಸಕ ಎ.ಟಿ.ರಾಮಸ್ವಾಮಿ, ಸಕಲೇಶಪುರ ಶಾಸಕ ಸಿಮೆಂಟ್ ಮಂಜು, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಪ್ರುರುಷೋತ್ತಮ್, ಅಪರ ನಿರ್ದೇಶಕ ಜಿ.ಪಿ. ದೇವರಾಜ್, ಜಿಪಂ ಉಪ ಕಾರ್ಯದರ್ಶಿ ಎಂ. ಬಾಬು, ಹಾಸನ ವಾಣಿಜ್ಯ ತೆರಿಗೆ ಇಲಾಖೆ ಸಹಾಯಕ ಆಯುಕ್ತ ಎಂ. ಬಿ. ಚನ್ನಕೇಶವ, ಚಾಮರಾಜನಗರ ಉಪ ವಿಭಾಗಾಧಿಕಾರಿ ಮಹೇಶ್, ಉದ್ಯಮಿ ಎಂ.ಟಿ. ಕೃಷ್ಣೇಗೌಡ, ತಾಲ್ಲೂಕು ಗ್ಯಾರೆಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಶ್ರೀಧರ್ ಗೌಡ ಭಾಗವಹಿಸುವರು ಎಂದು ಅವರು ಮಾಹಿತಿ ನೀಡಿದರು.

ಟ್ರಸ್ಟ್ ಪದಾಧಿಕಾರಿಗಳಾದ ಲೋಕೇಶ್, ಎಚ್.ಆರ್.ರಂಗಸ್ವಾಮಿ, ಕೆ.ಜಿ.ಪ್ರದೀಪ್, ಮೋಹನ್‌ಕುಮಾರ್, ಡಿ.ಎಸ್.ಅಶೋಕ್, ಸಿ.ರವಿಕುಮಾರ್ ಇನ್ನಿತರರು ಹಾಜರಿದ್ದರು.

ವನಗೂರು ಗ್ರಾ.ಪಂ. ಜೆಡಿಎಸ್ ತೆಕ್ಕೆಗೆ

ಹೆತ್ತೂರು: ಹೋಬಳಿಯ ವಣಗೂರು ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಾದ ಹೇಮಂತ್ ಕುಮಾರ್, ಉಪಾಧ್ಯಕ್ಷರಾಗಿ ಪುಷ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಬಿಜೆಪಿ ಅಭ್ಯರ್ಥಿ ಸತೀಶ್ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದು, ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಹೇಮಂತ್‌ಕುಮಾರ್ ಅವರು ಆರು ಮತಗಳನ್ನು ಪಡೆದು ಜಯಶೀಲರಾದರೆ, ಪ್ರತಿಸ್ಪರ್ಧಿ ಸತೀಶ್ ಅವರು ಎರಡು ಮತ ಪಡೆದು ಪರಾಭವಗೊಂಡರು. ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಅವರು ನೂತನ ಅಧ್ಯಕ್ಷ, ಉಪಾಧ್ಯಕ್ಷೆ, ಸದಸ್ಯರುಗಳನ್ನು ಅಭಿನಂದಿಸಿದರು. ಮಾಜಿ ಜಿಲ್ಲಾ ಪಂಚಾಯತಿ ಸದಸ್ಯರುಗಳಾದ ಚಂಚಲ ಕುಮಾರಸ್ವಾಮಿ, ಉಜ್ವರುಜ್ಮಿ ಸುದರ್ಶನ್, ಮಾಜಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷೆ ಸುಜಾತ ಮಲ್ಲೇಶ್, ಗೊದ್ದು ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕೌಶಿಕ್, ಜೆಡಿಎಸ್ ಮುಖಂಡರಾದ ಸಚಿನ್ ಪ್ರಸಾದ್. ಸುದರ್ಶನ್. ಕುಮಾರ. ಸುಮನ್ ಹೆತ್ತೂರು. ಗ್ರಾಮ ಪಂಚಾಯ್ತಿ ಸದಸ್ಯರುಗಳು, ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷರು ಉಪಾಧ್ಯಕ್ಷರು, ಸ್ಥಳೀಯ ಮುಖಂಡರುಗಳು ಭಾಗವಹಿಸಿದ್ದರು.

ಹಿರೀಸಾವೆ ಗ್ರಾಪಂಗೆ ಪರಮೇಶ ಅಧ್ಯಕ್ಷ

• ಪ್ರಜೋದಯ

ಬಿಹಾರ: ಶಾಸಕಾಂಗ ಪಕ್ಷದ ನಾಯಕರಾಗಿ ನಿತೀಶ್

ಇಂದು 10ನೇ ಬಾರಿಗೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ | ಅದ್ಧೂರಿ ಕಾರ್ಯಕ್ರಮಕ್ಕೆ ಸಿದ್ಧತೆ

• ಪ್ರಜೋದಯ ವರದಿ

ಬಿಹಾರ: ಜೆಡಿ(ಯು) ವರಿಷ್ಠ ನಿತೀಶ್ ಕುಮಾರ್ ಅವರನ್ನು ಶಾಸಕಾಂಗ ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಲಾಗಿದೆಯೆಂದು ರಾಜ್ಯ ಸಚಿವ ಶ್ರವಣ್ ಕುಮಾರ್ ಅವರು ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಬುಧವಾರ ಮಾತನಾಡಿದ ಅವರು, ಜೆಡಿಯು ಶಾಸಕಾಂಗದ ಸಭೆಯಲ್ಲಿ ಹೊಸದಾಗಿ ಆಯ್ಕೆಯಾದ ಶಾಸಕರು, ನಿತೀಶ್ ಕುಮಾರ್ ಅವರನ್ನು ಜೆಡಿಯು ಶಾಸಕಾಂಗ ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಿದ್ದಾರೆ. ಎನ್‌ಡಿಎ ಘಟಕಗಳ ಸಭೆಗೆ ಮುಂಚಿತವಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆಯೆಂದು ತಿಳಿಸಿದ್ದಾರೆ.

ಸಚಿವಾಲಯದ ಸಂವಾದ್‌ನಲ್ಲಿ ಈ ಸಭೆ ನಡೆದಿದೆ. ಹೊಸದಾಗಿ ಆಯ್ಕೆಯಾದ ಎಲ್ಲಾ ಶಾಸಕರು ಮತ್ತು 22 ಮಂದಿ ವಿಧಾನ ಪರಿಷತ್ ಸದಸ್ಯರು ಭಾಗವಹಿಸಿದ್ದರು. ಜೆಡಿ (ಯು) ಶಾಸಕಾಂಗ ಪಕ್ಷದ ನಾಯಕರಾಗಿ ನಿತೀಶ್ ಕುಮಾರ್ ಅವರನ್ನು ನೇಮಿಸುವ ಪ್ರಸ್ತಾಪವನ್ನು ಪಕ್ಷದ ನಾಯಕರಾದ ವಿಜಯ್ ಚೌಧರಿ ಮತ್ತು ಉಮೇಶ್ ಕುಶ್ವಾಹ ಅವರು ಮಂಡಿಸಿದರು. ಜೆಡಿ(ಯು) ಹಿರಿಯ ನಾಯಕ ಬಿಜೇಂದ್ರ ಯಾದವ್ ಅವರು ಅದನ್ನು ಅನುಮೋದಿಸಿದರು. ನಂತರ, ಜೆಡಿ(ಯು) ಕಾರ್ಯಕಾರಿ ರಾಷ್ಟ್ರೀಯ ಅಧ್ಯಕ್ಷ ಸಂಜಯ್ ಝಾ ಮತ್ತು ಕೇಂದ್ರ ಸಚಿವ ರಾಜೀವ್ ರಂಜನ್ ಸಿಂಗ್ ಕೂಡ ಈ ಪ್ರಸ್ತಾಪವನ್ನು ಅನುಮೋದಿಸಿದರು ಎಂದು ಶ್ರವಣ್ ಕುಮಾರ್ ಹೇಳಿದ್ದಾರೆ.

ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದ ನಂತರ, ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಪಕ್ಷದ ನಾಯಕರನ್ನು ಉದ್ದೇಶಿಸಿ ಮಾತನಾಡಿದ ನಿತೀಶ್ ಕುಮಾರ್, ರಾಜ್ಯದ ಕಲ್ಯಾಣಕ್ಕಾಗಿ ಅವಿಶ್ರಾಂತವಾಗಿ ಕೆಲಸ ಮಾಡುವಂತೆ ಮನವಿ ಮಾಡಿದ್ದಾರೆ. ನಿತೀಶ್ ಕುಮಾರ್ ಅವರು, ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರನ್ನು ಭೇಟಿ ಮಾಡಿ ಹೊಸ ಸರ್ಕಾರ ರಚನೆಗೆ ಪ್ರಕ್ರಿಯೆ ಆರಂಭಿಸುವಂತೆ ಅವರು ವಿನಂತಿಸಿದ್ದಾರೆ. ಅಲ್ಲದೇ ಬುಧವಾರವೇ ಬಿಹಾರದ 17ನೇ ವಿಧಾನಸಭೆಯು ವಿಸರ್ಜನೆಗೊಳ್ಳಲಿದೆ.

ಗುರುವಾರ (ನ.20) ಪಟ್ನಾದ ಗಾಂಧಿ ಮೈದಾನದಲ್ಲಿ ದಾಖಲೆಯ 10ನೇ ಬಾರಿಗೆ ಬಿಹಾರ ಮುಖ್ಯಮಂತ್ರಿಯಾಗಿ ನಿತೀಶ್ ಕುಮಾರ್ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಚುನಾವಣೆಗೆ ಸ್ಪರ್ಧಿಸದೆ ತಪ್ಪು ಮಾಡಿದೆ

ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸದಿರುವ ನನ್ನ ನಿರ್ಧಾರವು ತಪ್ಪು ಎಂದು ಪರಿಗಣಿಸಬಹುದು ಎಂದು ಜನ ಸುರಾಜ್ ಪಕ್ಷದ ನಾಯಕ ಪ್ರಶಾಂತ್ ಕಿಶೋರ್ ಹೇಳಿದ್ದಾರೆ. ಬಿಹಾರ ಚುನಾವಣೆಯಲ್ಲಿ ಶೇ.4ಕ್ಕಿಂತ ಕಡಿಮೆ ಮತ ಗಳಿಸುವುದಾಗಿ ಎಂದೂ ನಿರೀಕ್ಷೆ ಮಾಡಿರ ಲಿಲ್ಲ. ಚುನಾವಣೆಯಲ್ಲಿ ಸ್ಪರ್ಧಿಸದಿರುವ ನನ್ನ ನಿರ್ಧಾರ ತಪ್ಪಾಗಿತ್ತು ಎಂದು ಪರಿಗಣಿಸಬಹುದು. ಪಕ್ಷ ಉತ್ತಮ ಸಾಧನೆ ಮಾಡಲು ಇನ್ನು ಬಹಳಷ್ಟು ಪರಿಶ್ರಮಪಡಬೇಕಿದೆ ಎಂದು ಹೇಳಿದ್ದಾರೆ. ಬಿಹಾರದಲ್ಲಿ ಗೆಲ್ಲದ ಹೊರತು ನಾನು ಹಿಂದೆ ಸರಿಯುವುದಿಲ್ಲ. ಅದಕ್ಕಾಗಿ ಎಷ್ಟು ಸಮಯ ಬೇಕೆಂಬುದು ನನಗೆ ತಿಳಿದಿಲ್ಲ. ವಿಧಾನಸಭಾ ಚುನಾವಣೆಗೂ ಮುನ್ನ ಪ್ರತಿ ಕ್ಷೇತ್ರದ ಆರು ಸಾವಿರ ಫಲಾನುಭವಿಗಳಿಗೆ 10 ಸಾವಿರ ರೂ. ನೀಡದಿದ್ದರೆ ಮತ್ತು ಸ್ವಉದ್ಯೋಗ ಯೋಜನೆ ಯಡಿ 1.5 ಕೋಟಿ ಮಹಿಳೆಯರಿಗೆ 2 ಲಕ್ಷ ರೂ. ಆರ್ಥಿಕ ನೆರವು ನೀಡುವ ಭರವಸೆ ನೀಡಿರದಿ ದ್ದರೆ ಜೆಡಿಯು ಕೇವಲ 25 ಸ್ಥಾನಗಳಿಗೆ ಸೀಮಿತವಾಗುತ್ತಿತ್ತು ಎಂದು ಜನ ಸುರಾಜ್ ಪಕ್ಷದ ನಾಯಕ ಪ್ರಶಾಂತ್ ಕಿಶೋರ್ ಮಂಗಳವಾರ ಹೇಳಿಕೆ ನೀಡಿದ್ದರು. ಇತ್ತೀಚೆಗೆ ಅಂತ್ಯಗೊಂಡ ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಜನ ಸುರಾಜ್ ಪಕ್ಷಕ್ಕೆ ಒಂದೇ ಒಂದು ಸ್ಥಾನ ಗೆಲ್ಲಲು ಸಾಧ್ಯವಾಗಿಲ್ಲ.

ಜೆಡಿಎಸ್ ರಜತ ಮಹೋತ್ಸವ

» ಮೊದಲನೇ ಪುಟದಿಂದ

ಚುನಾವಣೆಯಲ್ಲೂ ಸ್ಪರ್ಧಿಸುತ್ತೇನೆಂದುಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಸ್. ಲಿಂಗೇಶ್ ಅವರು ಮಾತನಾಡಿ, ಜೆಡಿಎಸ್ ಒಂದು ಜಾತಿಗೆ ಸೀಮಿತವಾಗದೆ ಎಲ್ಲಾ ಜಾತಿ, ಧರ್ಮಗಳನ್ನು ಒಳಗೊಂಡ ಪಕ್ಷವಾಗಿದೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಯಾವ ಸಂದರ್ಭದಲ್ಲೂ ವಿರಮಿಸದೆ ಪಕ್ಷ ಸಂಘಟನೆ ಹಾಗು ರಾಜ್ಯದ ಅಭಿವೃದ್ಧಿಗೆ ಕೆಲಸ ಮಾಡಿದ್ದಾರೆ. ದೇಶದ ಎಷ್ಟೋ ಪ್ರಾದೇಶಿಕ ಪಕ್ಷಗಳು ನೆಲಕಚ್ಚಿವೆ. ಆದರೆ, ಜೆಡಿಎಸ್ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ. ಪಕ್ಷ ಸಂಘಟನೆ ಹಿತ ದೃಷ್ಟಿಯಿಂದ ವರಿಷ್ಠರ ಜೊತೆಗೂಡಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದೆಂದರು.

ಶಾಸಕ ಹೆಚ್.ಪಿ.ಸ್ವರೂಪ್, ಜೆಡಿಎಸ್ ತಾಲ್ಲೂಕು ಅಧ್ಯಕ್ಷರಾದ ಎಸ್. ದ್ಯಾವೇಗೌಡ, ಕೆ.ಎಸ್.ಮಂಜುನಾಥ್, ಜೆಡಿಎಸ್ ಜಿಲ್ಲಾ ವಕ್ತಾರ ರಘು ಹೊಂಗೆರೆ ಇತರರಿದ್ದರು.

ಅವಧಿ ವಿಸ್ತರಣೆಗಾಗಿ ಹೈಕೋರ್ಟ್ ಮೆಟ್ಟಿಲೇರಿದ ಸಮೀವುಲ್ಲಾ

• ಪ್ರಜೋದಯ ವರದಿ

ಅರಸೀಕೆರೆ: ಪ್ರಸಕ್ತ ಸಾಲಿನ ನಗರಸಭೆ ಆಡಳಿತಾವಧಿ ಪೂರ್ಣಗೊಳ್ಳುತ್ತಿದ್ದಂತೆ ರಾಜ್ಯ ಸರ್ಕಾರ ವಾರ್ಡ್‌ವಾರು ಮೀಸಲಾತಿ ಅಧಿಸೂಚನೆ ಪ್ರಕಟಿಸಿದ್ದರೆ ಮತ್ತೊಂದೆಡೆ ನಿಕಟಪೂರ್ವ ಅಧ್ಯಕ್ಷ ಎಂ.ಸಮೀವುಲ್ಲಾ ಅವರು ತಮ್ಮ ಅಧಿಕಾರ ಅವಧಿ ವಿಸ್ತರಿಸಬೇಕೆಂದು ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಮೂರು ರಾಜಕೀಯ ಪಕ್ಷಗಳಲ್ಲಿ ರಾಜಕೀಯ ಚಟುವಟಿಕೆಗಳು ಬಿರುಸು ಪಡೆದಿವೆ. ಈ ನಡುವೆ ನ್ಯಾಯಾಲಯ ಬಾಗಿಲು ತಟ್ಟಿರುವ ಎಂ.ಸಮೀವುಲ್ಲಾ ತಮ್ಮ ಮನವಿಗೆ ಮನ್ನಣೆ ಸಿಗುತ್ತದೆಂಬ ವಿಶ್ವಾಸದಲ್ಲಿದ್ದಾರೆ.

ಜನರು ಮತದಾನದ ಮೂಲಕ ನಮ್ಮನ್ನು ಆಶೀರ್ವದಿಸಿ ಅವರ ಸೇವೆ ಮಾಡಲು ಅವಕಾಶ ಕಲ್ಪಿಸಿ ಕೊಟ್ಟಿದ್ದಾರೆ. ಆದರೆ ಸೇವಾ ಅವಧಿಗೂ ಮುನ್ನವೇ ನಗರಸಭೆ ಅಧಿಕಾರ ಮುಕ್ತಾಯವಾಗುತ್ತಿರುವುದು ಮತದಾನದ ಮೌಲ್ಯಕ್ಕೆ ಅಪಮಾನ ಮಾಡಿದಂತಾಗುತ್ತದೆ. ಹಾಗಾಗಿ ಹೈಕೋರ್ಟ್ ನಲ್ಲಿ ಪ್ರಶ್ನಿಸಿದ್ದು ನ್ಯಾಯಾಲಯವು ಸೂಕ್ತ ತೀರ್ಪು ನೀಡಲಿದೆ ಎಂದು ಅವರು ಹೇಳಿದ್ದಾರೆ.

ಹೆಚ್ಚಿದ ಆಕಾಂಕ್ಷಿತರ ಸಂಖ್ಯೆ

ನಗರಸಭೆ 31 ವಾರ್ಡ್‌ಗಳನ್ನು ಒಳಗೊಂಡಿದ್ದು ಪ್ರತಿ ವಾರ್ಡ್‌ನಲ್ಲೂ ಹತ್ತಾರು ಜನರು ಅಭ್ಯರ್ಥಿಯಾಗುವ ಇಂಗಿತ ವ್ಯಕ್ತಪಡಿಸುತ್ತಿದ್ದಾರೆ. ಕೆಲವರಂತೂ ಯಾವುದೇ ಪಕ್ಷ ಬಿ ಫಾರಂ ನೀಡದಿದ್ದರೂ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ನಗರಸಭೆ ಪ್ರವೇಶಿಸುವ ಉಮೇದಿನಲ್ಲಿದ್ದಾರೆ. ಹೈಕೋರ್ಟ್ ಸಮೀವುಲ್ಲಾ ಅವರ ಮನವಿಯನ್ನು ಪುರಸ್ಕರಿಸುತ್ತದೆಯೋ ಅಥವಾ ಪೌರಾಡಳಿತ ಇಲಾಖೆ ತೆಗೆದುಕೊಂಡಿರುವ ನಿರ್ಧಾರವನ್ನು ಎತ್ತಿ ಹಿಡಿಯುತ್ತದೆಯೋ ಕಾದು ನೋಡಬೇಕಿದೆ. ಕಳೆದ ಚುನಾಯಿತ ಪ್ರತಿನಿಧಿಗಳ ಅಧಿಕಾರ ಮುಂದುವರಿಕೆಯೋ ಅಥವಾ ಚುನಾವಣೆ ಎದುರಿಸುವಂತೆಯೋ ಯಾವ ರೀತಿಯ ತೀರ್ಪು ಹೊರ ಬರುತ್ತದೆಯೋ ಸದ್ಯ ಗೊತ್ತಿಲ್ಲ. ಈ ಕುರಿತು ನ್ಯಾಯಪೀಠ ಸಮಗ್ರ ವಿಚಾರಣೆ ನಡೆಸುತ್ತಿದ್ದು ಹೈಕೋರ್ಟ್ ತೀರ್ಪು ಹೊರ ಬೀಳುವ ತನಕ ಏನನ್ನು ಹೇಳಲು ಸಾಧ್ಯವಿಲ್ಲ ಎನ್ನುತ್ತಾರೆ ವಕೀಲ ವಿವೇಕ್.

ಜೈನ ಸಾಹಿತ್ಯ ಕನ್ನಡದ ಮೇಲೆ ಅಗಾಧ ಪ್ರಭಾವ

• ಪ್ರಜೋದಯ ವರದಿ

ಶ್ರವಣಬೆಳಗೊಳ: ಜೈನ ಸಾಹಿತ್ಯ ಕನ್ನಡ ಸಾಹಿತ್ಯದ ಮೇಲೆ ಅಗಾಧ ಪ್ರಭಾವ ಬೀರಿದೆ, ಪ್ರೇರಣೆ ಆಗಿದೆ. ಆದರಿಂದ ಕನ್ನಡ ಸಾಹಿತ್ಯ ಹಿಗ್ಗಿದೆ, ಹಿರಿಮೆ ಪಡೆಯಲು ಸಾಧ್ಯವಾಗಿದೆ ಎಂದು ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಅವರು ಹೇಳಿದರು.

ಬಾಹುಬಲಿ ತಾಂತ್ರಿಕ ಮಹಾವಿದ್ಯಾಲಯದಲ್ಲಿಂದು ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವ-ಸಿರಿವೈಭವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರತ್ನತ್ರಯರಾದ ಪಂಪ, ಪೊನ್ನ, ರನ್ನ ಹಾಗು ಜನ್ನ ಮೊದಲಾದ ಜೈನ ಕವಿಗಳ ಕೊಡುಗೆ ಅಪಾರ, ಅವರಿಂದಲೇ ಕನ್ನಡ ಶ್ರೀಮಂತವಾಗಿದೆ. ಈ ಮಹಾನ್ ಕವಿಗಳಿಂದಲೇ ಮಹಾಕಾವ್ಯ ಹುಟ್ಟಿವೆ. ಜೈನರ ಕಾಲದ ಶಿಲಾಶಾಸನಗಳು ಅದಕ್ಕೆ ಸಾಕ್ಷಿಯಾಗಿವೆ ಎಂದರು.

ಕನ್ನಡ ಸಾಹಿತ್ಯಕ್ಕೆ ಜೈನ ಧರ್ಮ ಹಾಗು ಜೈನ ಸಾಹಿತಿಗಳ ಕೊಡುಗೆ ಅಪಾರ, ಅವಿಸ್ಮರಣೀಯ. ದೇಶದಲ್ಲಿ ಹೆಚ್ಚು ಜ್ಞಾನಪೀಠ ಪ್ರಶಸ್ತಿ ಪಡೆದಿರುವ ಕನ್ನಡದ ಪ್ರಾಚೀನತೆ ಹಾಗು ಕನ್ನಡಕ್ಕೆ ಶಾಸ್ತ್ರೀಯ ಮಾನ್ಯತೆ ಸಿಗಲು ಹಾಸನ ಜಿಲ್ಲೆಯ ಕೊಡುಗೆ ಅಪಾರ. ನಮ್ಮ ಜಿಲ್ಲೆಯ ಬೇಲೂರು ತಾಲ್ಲೂಕು ಹಲ್ಮಿಡಿಯಲ್ಲಿ ದೊರೆತ ಶಿಲಾಶಾಸನ ಕನ್ನಡದ ಪ್ರಾಚೀನತೆಗೆ ಹೆಗ್ಗುರುತಾಗಿದೆ. ಹಲ್ಮಿಡಿ ಶಾಸನ ಸಿಗದೇ ಇದ್ದಿದ್ದರೆ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರಕಲು ಕಷ್ಟವಾಗುತ್ತಿತ್ತು ಎಂದು ತಿಳಿಸಿದರು.

ನನ್ನ ಸೌಭಾಗ್ಯ ಎಂದರೆ ಹಾಸನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷನಾಗಿದ್ದ ಅವಧಿ ಯಲ್ಲಿ ಹಲ್ಮಿಡಿ ಶಿಲಾ ಶಾಸನದ ಪ್ರತಿಕೃತಿಯನ್ನು ಅಭಿವೃದ್ಧಿ ಪಡಿಸಲು ಹಾಗು ಹಲ್ಮಿಡಿ ಗ್ರಾಮದ ಮೂಲ ಸೌಕರ್ಯ ಅಭಿವೃದ್ಧಿಗೆ ಶ್ರಮಿಸಿದ ಸಮಾಧಾನ ನನ್ನದು ಎಂದರು. ಇದೇ ವೇಳೆ ಜೈನಕಾಶಿ ಶ್ರವಣಬೆಳಗೊಳಕ್ಕೂ ತಮಗೂ ಇರುವ ನಂಟನ್ನು ನೆನಪಿಸಿಕೊಂಡ ಮದನಗೌಡರು, ಜಿನೈಕ್ಯ ಪರಮ ಪೂಜ್ಯ ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರು ಎರಡು ದಶಕಗಳ ಹಿಂದೆ ಇಲ್ಲಿ ಕೆಲಸ ಮಾಡಲು ಅವಕಾಶ ಮಾಡಿ ಕೊಟ್ಟರು ಎಂದು ಸ್ಮರಿಸಿದರು.

ಜಾನಪದ ಗಾಯಕ ಟಿ.ಆರ್. ಸ್ವಾಮಿ ಮಾತನಾಡಿ, ಗಡಿ ಸಮಸ್ಯೆ ಬಗ್ಗೆ ಕಳವಳ ವ್ಯಕ್ತಪಡಿಸಿ, ಈಗಲಾದರೂ ನಾವೆಲ್ಲರೂ ಎಚ್ಚೆತ್ತುಕೊಳ್ಳದೇ ಇದ್ದರೆ ಸಂಕಷ್ಟ ಎದುರಿಸಬೇಕಾಗುತ್ತದೆ. ಕೇಂದ್ರ ಸರ್ಕಾರ ನಡೆಸುವ ಎಲ್ಲಾ ಪರೀಕ್ಷೆ ಕನ್ನಡದಲ್ಲಿ ನಡೆಯಬೇಕು. ಕೇಂದ್ರದ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಅವಕಾಶ ಕೊಡಬೇಕು, ಎಲ್ಲಕ್ಕಿಂತ ಮುಖ್ಯವಾಗಿ ಮಾತೃಭಾಷೆಯಲ್ಲಿ ಶಿಕ್ಷಣ ಸಿಗುವಂತಾಗಬೇಕೆಂದು ಕೊಡಬೇಕು.

ಪ್ರಾಂಶುಪಾಲ ಡಾ.ಡಿ.ಸುನೀಲ್ ಕುಮಾರ್, ಚನ್ನರಾಯ ಪಟ್ಟಣ ಸ್ವಯಂ ಪ್ರೇರಿತ ರಕ್ತದಾನ ಕೇಂದ್ರದ ಮುಖ್ಯಸ್ಥ ಭರತ್, ಕಾಲೇಜಿನ ಉಪನ್ಯಾಸಕರು ಹಾಜರಿದ್ದರು.

ಕ್ರೀಡೆಯಿಂದ ಆತ್ಮವಿಶ್ವಾಸ, ಗೌರವ ಹೆಚ್ಚಳ: ಶ್ರೇಯಸ್

ಅಥ್ಲೆಟಿಕ್ಸ್, ಕ್ರೀಡಾಕೂಟ, ರಾಜ್ಯ ಮಟ್ಟದ ಹಾಕಿ ಪಂದ್ಯಾವಳಿಗೆ ಚಾಲನೆ

• ಪ್ರಜೋದಯ ವರದಿ

ಹಾಸನ: ಕ್ರೀಡೆ ಎನ್ನುವುದು ಕೇವಲ ಮಾನಸಿಕ, ದೈಹಿಕ ಎರಡಕ್ಕಷ್ಟೇ ಸೀಮಿತವಾಗಿಲ್ಲ, ಆತ್ಮ ವಿಶ್ವಾಸ ಮತ್ತು ಗೌರವ ಹೆಚ್ಚಳವಾಗುತ್ತದೆ. ಈ ನಿಟ್ಟಿನಲ್ಲಿ ಕ್ರೀಡೆಗೆ ಹೆಚ್ಚು ಒತ್ತು ನೀಡುವಂತೆ ಸಂಸದ ಶ್ರೇಯಸ್ ಪಟೇಲ್ ಅವರು ಕರೆ ನೀಡಿದರು.

ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಆಯೋಜಿಸಿರುವ 14 ವಯೋಮಿತಿ ಬಾಲಕ ಮತ್ತು ಬಾಲಕಿಯರ ಅಥ್ಲೆಟಿಕ್ಸ್ ಕ್ರೀಡಾಕೂಟ ಮತ್ತು 14 ರಿಂದ 17 ವಯೋಮಿತಿ ಬಾಲಕ ಮತ್ತು ಬಾಲಕಿಯರ ವಿಭಾಗ ಹಾಗು ರಾಜ್ಯ ಮಟ್ಟದ ಹಾಕಿ ಪಂದ್ಯಾವಳಿಗೆ ಬುಧವಾರ ಸಂಜೆ ಚಾಲನೆ ನೀಡಿ ಮಾತನಾಡಿದ ಅವರು, ನಮ್ಮ ಜಿಲ್ಲೆಗೆ ಈ ದಿನ ಐತಿಹಾಸಿಕ ದಿನವಾಗಿದೆ. ಈ ಕ್ರೀಡಾಕೂಟ ಜಿಲ್ಲೆಯಲ್ಲಿ ನಡೆಯುತ್ತಿರುವುದು ನಮ್ಮ ಅದೃಷ್ಟವಾಗಿದೆ. ಇಂದು ರಾಜ್ಯದ ಮೂಲೆ ಮೂಲೆ ಯಿಂದ ನಮ್ಮ ಜಿಲ್ಲೆಗೆ ಮಕ್ಕಳು ಆಗಮಿಸಿರುವುದು ಸಂತಸವಾಗುತ್ತಿದೆ ಎಂದರು.

ಆಟದಲ್ಲಿ ಸೋಲು-ಗೆಲುವು ಎನ್ನುವುದು ಸಾಮಾನ್ಯ ಹಾಗಾಗಿ ಸೋತರೆ ಕುಗ್ಗದೆ ಮುನ್ನುಗ್ಗುವ ಕೆಲಸ ಮಾಡಿ. ಕ್ರೀಡೆಯಲ್ಲಿ ಸಾಧನೆ ಮಾಡಿರುವ ವ್ಯಕ್ತಿಗಳ ಹಾದಿಯಲ್ಲಿ ಎಲ್ಲಾ ಮಕ್ಕಳು ಸಾಗಿ ಉತ್ತಮವಾದ ಸರ್ಕಾರಿ ಹುದ್ದೆಗಳನ್ನೂ ಅಲಂಕರಿಸಿ ಎಂದ ಅವರು ಮನೆಯಲ್ಲಿ ತಂದೆ ತಾಯಿಗೆ ಎಷ್ಟು ಗೌರವವನ್ನು ಕೊಡುತ್ತಿರೋ ಅಷ್ಟೇ ಗೌರವವನ್ನು ಶಿಕ್ಷಕರಿಗೂ ಕೊಡಬೇಕು ಎಂದು ಮಕ್ಕಳಿಗೆ ಕಿವಿಮಾತು ಹೇಳಿದರು.

ಶಾಸಕ ಹೆಚ್.ಪಿ.ಸ್ವರೂಪ್ ಅವರು ಮಾತನಾಡಿ, ನಮ್ಮ ಜಿಲ್ಲೆಯಲ್ಲಿ 8 ವರ್ಷದ ನಂತರ ರಾಜ್ಯ ಮಟ್ಟದ ಕ್ರೀಡಾ ಕೂಟವನ್ನು ಉತ್ತಮವಾಗಿ ಆಯೋಜಿಸಲಾಗಿದೆ. ಇದು ನಮಗೆ ಸಂತೋಷದ ಸಂಗತಿ. ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಮಕ್ಕಳು ಕ್ರೀಡಾಕೂಟಕ್ಕೆ ಆಗಮಿಸಿದ್ದಾರೆ ಕ್ರೀಡೆ ಮುಗಿಯುವವರೆಗೂ ಎಲ್ಲರನ್ನು ಆಯಾ ಜಿಲ್ಲೆಯ ದೈಹಿಕ ಶಿಕ್ಷಕರು ಜೋಪಾನ ವಾಗಿ ನೋಡಿಕೊಳ್ಳಿ ಎಂದು ತಿಳಿಸಿದರಲ್ಲದೆ, ಎಲ್ಲಾ ಮಕ್ಕಳು ಉತ್ತಮವಾಗಿ ಆಟವಾಡಿ ಎಂದು ಶುಭ ಹಾರೈಸಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ. ಕೃಷ್ಣೇಗೌಡ ಅವರು ಮಾತನಾಡಿ, ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು, ಓದುವುದಕ್ಕೆ ಎಷ್ಟು ಒತ್ತು ಕೊಡುತ್ತಿರೋ ಅಷ್ಟೇ ಒತ್ತನ್ನು ವಿದ್ಯಾರ್ಥಿಗಳು ಕ್ರೀಡೆಗೂ ಕೊಡಬೇಕು. ಎಲ್ಲಾ ಮಕ್ಕಳು ಆಸಕ್ತಿಯಿಂದ ಕ್ರೀಡಾಕೂಟಕ್ಕೆ ಆಗಮಿಸಿದ್ದೀರಿ ಎಲ್ಲರೂ ಉತ್ತಮವಾಗಿ ಆಟ ಆಡಿ ಎಂದು ಶುಭ ಹಾರೈಸಿದರು.

ಈ ವೇಳೆ ಕಾರ್ಯಕ್ರಮದ ಆರಂಭದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಕ್ರೀಡಾ ವಿದ್ಯಾರ್ಥಿಗಳು ಪಥಸಂಚಲನದ ಮೂಲಕ ಗಣ್ಯರಿಗೆ ಗೌರವ ಸಲ್ಲಿಸಿದರು.

ವಿದ್ಯಾರ್ಥಿಗಳು ಭರತ ನಾಟ್ಯ ಮಾಡುವ ಮೂಲಕ ಹಾಗು ಜಿಲ್ಲೆಯ ದೈಹಿಕ ಶಿಕ್ಷಕರು ಡೊಳ್ಳು ಕುಣಿತದ ಮೂಲಕ ಕಾರ್ಯಕ್ರಮಕ್ಕೆ ಮೆರಗು ತಂದುಕೊಟ್ಟರು. ನಂತರ ಗಣ್ಯರಿಗೆ ಕ್ರೀಡಾ ಜ್ಯೋತಿಯನ್ನು ಹಸ್ತಾಂತರಿಸಲಾಯಿತು.

ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಬಲರಾಮ, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಲಿಂಗಯ್ಯ ಮತ್ತಿತರರು ಉಪಸ್ಥಿತರಿದ್ದರು. ಜಿಲ್ಲೆಯ ವಿವಿಧ ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು, ರಾಜ್ಯದ ವಿವಿಧ ಜಿಲ್ಲೆಯ ದೈಹಿಕ ಶಿಕ್ಷಕರು, ತೀರ್ಪುಗಾರರು, ವಿದ್ಯಾರ್ಥಿಗಳು ಪೋಷಕರು ಮತ್ತಿತರರು ಆಗಮಿಸಿದ್ದರು.

ರುದ್ರಪಟ್ಟಣ ಪಿಎಸಿಸಿಎಸ್ ಅಧ್ಯಕ್ಷರಾಗಿ ದಿಲೀಪ್ ಕುಮಾರ್ ಆಯ್ಕೆ

• ಪ್ರಜೋದಯ ವರದಿ

ಕೊಣನೂರು: ಆರಕಲಗೂಡು ತಾಲ್ಲೂಕಿನ ರುದ್ರಪಟ್ಟಣ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ದಿಲೀಪ್ ಕುಮಾರ್ ವಿರೋಧ ಆಯ್ಕೆಯಾದರು.

ಉಪಾಧ್ಯಕ್ಷರಾಗಿ ನಾಗಯ್ಯ, ಸಂಘದ ನಿರ್ದೇಶಕರಾಗಿ ಗಿರೀಶ್, ಹರೀಶ್ ರಾಮೇಗೌಡ, ಸುರೇಶ್, ಯಶೋಧಮ್ಮ ರವಿ ಅವರು ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿಯಾಗಿ ಬಸವರಾಜು ಕರ್ತವ್ಯ ನಿರ್ವಹಿಸಿದರು.

ನೂತನ ಅಧ್ಯಕ್ಷ ದಿಲೀಪ್ ಕುಮಾರ್ ಅವರು